# 54

# ನಾಯಕತ್ವಕ್ಕೆ ಆತನ ಎಚ್ಚರಿಕೆ

# (23:1-12)

ಮತ್ತಾಯನ ಸುವಾರ್ತೆಯ ಮುಂದಿನ ಮೂರು ಅಧ್ಯಾಯಗಳನ್ನು 23 ರಿಂದ 25, ಮತ್ತು ಐದನೆಯ ಬೋಧನೆಯ ವಿಭಾಗಗಳನ್ನು ಒಳಗೊಂಡಿವೆ. ಸುವಾರ್ತೆಯ ಈ ಪ್ರಾಮುಖ್ಯವಾದ ಭಾಗವು, "ಯೇಸು ಈ ಎಲ್ಲಾ ಮಾತುಗಳನ್ನು ಮುಗಿಸಿದ ನಂತರ" ಎಂಬ ಸಾಂಪ್ರದಾಯಿಕ ಪದಗಳೊಂದಿಗೆ ಮುಕ್ತಾಯವಾಗುತ್ತವೆ (26:1; ನೋಡಿರಿ 7:28; 11:1; 13:53; 19:1). ಇದು ಕರ್ತನ ಕೊನೆಯ ಸಾರ್ವಜನಿಕ ಉಪದೇಶವನ್ನು (ಅಧ್ಯಾಯ 23) ಮತ್ತು ತನ್ನ ಶಿಷ್ಯರಿಗೆ ನೀಡಿದ ವೈಯಕ್ತಿಕ ಉಪದೇಶವನ್ನು ಒಳಗೊಂಡಿದೆ (ಅಧ್ಯಾಗಳು 24; 25). ಎರಡು ಭಾಷಣಗಳು ಯೆರೂಸಲೇಮಿನ ನಾಶನ ಮತ್ತು ಅಂತಿಮ ನ್ಯಾಯತೀರ್ಪಿನ ಉಲ್ಲೇಖಗಳೊಂದಿಗೆ ಒಟ್ಟಾಗಿ ಹೆಣೆದುಕೊಂಡಿವೆ.

ಅಧ್ಯಾಯ 22 ಸಾರಾಂಶದೊಂದಿಗೆ ಮುಕ್ತಾಯವಾಗುತ್ತದೆ, "ಅದಕ್ಕೆ ಉತ್ತರವಾಗಿ ಯಾರು ಒಂದು ಮಾತಾದರೂ ಆತನಿಗೆ ಹೇಳಲಾರದೆ ಹೋದರು. ಇದಲ್ಲದೆ ಅಂದಿನಿಂದ ಆತನನ್ನು ಇನ್ನೇನಾದರೂ ಕೇಳುವದಕ್ಕೆ ಯಾರಿಗೂ ಧೈರ್ಯ ಹುಟ್ಟಲಿಲ್ಲ" (22:46). ಈ ಹೇಳಿಕೆಯು ಖಂಡಿತವಾಗಿಯೂ ಯೆಹೂದ್ಯ ನಾಯಕರ ಕುರಿತಾಗಿ ಹೇಳಲಾಗಿದೆ. ಅಂದಿನಿಂದ ಅವರು ಆತನೊಂದಿಗೆ ಮಾತನಾಡಲೇ ಇಲ್ಲ, ಆತನು ಜನಸಮೂಹವನ್ನು ಮತ್ತು ತನ್ನ ಶಿಷ್ಯರನ್ನು ಸಂಭೋದಿಸಿದನು (23:1). ಆತನು ಅನೇಕ ವಿಷಯಗಳ ಕುರಿತಾಗಿ ಮಾತನಾಡಿರಬಹುದು; ಆದರೆ ಆತನು ಈ ಅನುಭವವನ್ನು ಹೊಂದಿದ ನಂತರ, ಆತನು ಬೋಧನೆಗಳನ್ನು ಮತ್ತು ಯೆಹೂದ್ಯ ನಾಯಕರ, ಶಾಸ್ತ್ರಿಗಳ, ಮತ್ತು ಫರಿಸಾಯರ ನಡತೆಯನ್ನು ಸಂಭೋದಿಸುವದಕ್ಕೆ ಪ್ರಾರಂಭಿಸಿದನು. R. T. France ರವರು ಗಮನಿಸಿದಂತೆ, ಯೇಸುವಿನ ಉದ್ದೇಶ ಫರಿಸಾಯರ ನೀತಿನ್ಯಾಯದ ಸಂಕೋಲೆಯಿಂದ ತನ್ನ ಶೋತ್ರುಗಳನ್ನು ಬಿಡಿಸುವದಕ್ಕಾಗಿ ಇವರನ್ನು ಬಹಿರಂಗಪಡಿಸುವದಾಗಿತ್ತು.[1]

ಯೇಸುವಿನ ಸಂದೇಶವು ಮೂರು ಭಾಗಗಳಲ್ಲಿ ವಿಂಗಡಿಸಲಾಗಿದೆ. ಮೊದಲನೆಯದರಲ್ಲಿ, ಶಾಸ್ತ್ರಿಗಳ ಮತ್ತು ಫರಿಸಾಯರು ಮೋಶೆಯ ಧರ್ಮಶಾಸ್ತ್ರವನ್ನು ಸರಿಯಾಗಿ ಬೋಧಿಸುವವರೆಗೆ ಅದನ್ನು ಅನುಸರಿಸಬೇಕೆಂದು ಜನರಿಗೆ ವಿನಂತಿಸಿಕೊಳ್ಳುತ್ತಾನೆ (23:1-12); ಆದರೆ ಈ ನಾಯಕರುಗಳ ನಡತೆಯನ್ನು ಅನುಸರಿಸುವದರ ಕುರಿತು ಎಚ್ಚರಿಸುತ್ತಾನೆ. ಅವರು ಕಪಟಿಗಳಾಗಿದ್ದಾರೆ ಯಾಕೆಂದರೆ ಅವರು ತಾವು ಬೋಧಿಸುವ ಸಂಗತಿಗಳಂತೆ ನಡೆಯುವದಿಲ್ಲ. ಇದು ಯಾವ ವಿಧದಲ್ಲಿ ಸರಿಯಾಗಿದೆ ಎಂಬುದನ್ನು ಯೇಸು ವರ್ಣಿಸುತ್ತಾನೆ. ಎರಡನೆಯದಾಗಿ, ಆತನು ಅವರ ಕಪಟತನದ ನಡತೆಗಾಗಿ ಏಳು ಸಂಕಟಗಳನ್ನು ಪ್ರಕಟಿಸುತ್ತಾನೆ (23:13-36). ಮೂರನೆಯದಾಗಿ, ಜನರು ಯೆರೂಸಲೇಮ ಪಟ್ಟಣದ ಕುರಿತು ದುಃಖಪಡುತ್ತಾನೆ ಯಾಕೆಂದರೆ ಆ ಪಟ್ಟಣದ ಜನರು ಆತನನ್ನು ತಿರಸ್ಕರಿಸಿದರು ಇದರಿಂದಾಗಿ ಮುಂದೆ ಅವರ ಮೇಲೆ ಬರುವ ಸಂಕಟವನ್ನು ಯೇಸು ನೋಡುವವನಾಗಿದ್ದನು (23:37-39). ಕ್ರಿ.ಶ. 70ರಲ್ಲಿ ರೋಮನ್ನರು ಪಟ್ಟಣವನ್ನು ನಾಶಮಾಡುತ್ತಾರೆ.

## ಇತರರು ವಿಧೇಯರಾಗಲು ತಿರಸ್ಕರಿಸುವಾಗ ವಿಧೇಯತೆಯಿಂದಿರುವಂತೆ ಕೇಳಿಕೊಳ್ಳುವದು (23:1-4)

**[1]ತರುವಾಯ ಯೇಸು ಜನರ ಗುಂಪಿಗೂ ತನ್ನ [2]ಶಿಷ್ಯರಿಗೂ ಹೇಳಿದ್ದೇನಂದರೆ - ಶಾಸ್ತ್ರಿಗಳೂ ಫರಿಸಾಯರೂ [3]ಮೋಶೆಯ ಪೀಠದಲ್ಲಿ ಕೂತುಕೊಂಡಿದ್ದಾರೆ; ಆದದರಿಂದ ಅವರು ನಿಮಗೆ ಏನೇನು ಹೇಳುತ್ತಾರೋ ಅದನ್ನೆಲ್ಲಾ ಮಾಡಿರಿ, ಕಾಪಾಡಿಕೊಳ್ಳಿರಿ; ಆದರೆ ಅವರ ನಡತೆಯ ಪ್ರಕಾರ ನಡೆಯಬೇಡಿರಿ; ಅವರು ಹೇಳುತ್ತಾರೇ ಹೊರತು ನಡೆಯುವದಿಲ್ಲ. [4]ಅವರು ಭಾರವಾದ ಹೊರೆಗಳನ್ನು ಕಟ್ಟಿ ಜನರ ಹೆಗಲಿನ ಮೇಲೆ ಹೊರಿಸುತ್ತಾರೆ; ತಾವಾದರೋ ಬೆರಳಿನಿಂದಲಾದರೂ ಅವುಗಳನ್ನು ಮುಟ್ಟಲೊಲ್ಲರು.**

**ವಚನ 1. ಯೇಸು** ಈ ಉಪದೇಶವನ್ನು ದೇವಾಲಯದಲ್ಲಿ **ಜನರ ಗುಂಪಿಗೂ ತನ್ನ ಶಿಷ್ಯರಿಗೂ** ನೀಡಿದನು. ನಿಶ್ಚಯವಾಗಿಯೂ, ಅದು ಶ್ರಮೆ ಮರಣ ಪುನರುತ್ಥಾನದ ವಾರದ ಗುರುವಾರವಾಗಿತ್ತು. ಲೂಕನ ಸುವಾರ್ತೆಯಲ್ಲಿ ಫರಿಸಾಯರೊಂದಿಗೆ ಔತಣ ಸನ್ನಿವೇಶದಲ್ಲಿ ಯೇಸುವಿನ ಇಂತಹದೇ ಹೇಳಿಕೆದಾಖಲಾಗಿದೆ (ಲೂಕ 11:37-52). ಯೇಸು ಕೆಲವೊಂದು ಸಮಯದಲ್ಲಿ, ತನ್ನ ಶೋತ್ರುಗಳ ಅವಶ್ಯಕತೆಗಳನ್ನು ಪೂರೈಸುವದಕ್ಕಾಗಿ ಸಂದೇಶದಲ್ಲಿ ಸ್ವಲ್ಪ ಬದಲಾವಣೆ ಮಾಡಿ ಪುನರಾವರ್ತಿಸಿದ್ದಾನೆ.

**ವಚನ 2.** ಯೇಸು ಯೆಹೂದ್ಯ ನಾಯಕರ ಕಪಟತನವನ್ನು ಬಹಿರಂಗಪಡಿಸಿದ್ದಾನೆ, ಅವರು ಜನರನ್ನು ಬರಲಿಕ್ಕಿರುವ ದೇವರ ರಾಜ್ಯಕ್ಕಾಗಿ ಪಶ್ಚಾತ್ತಾಪದೆಡೆಗೆ ನಡೆಸುತ್ತಿದ್ದರು. ಇವರು ದೇವರ ಪ್ರವಾದಿಗಳನ್ನು ತಿರಸ್ಕರಿಸಿದ್ದರು (ಸ್ನಾನಿಕನಾದ ಯೋಹಾನ) ಮತ್ತು ಆತನ ಮೆಸ್ಸೀಯ (ಯೇಸು). ಇದರ ಪರಿಣಾಮವಾಗಿ, ಅವರ ನಕರಾತ್ಮಕ ಪ್ರಭಾವ ಅನೇಕ ಜನರನ್ನು ದೇವರ ಚಿತ್ತವನ್ನು ತಿರಸ್ಕರಿಸುವಂತೆ ಮಾಡಿತು.

**ಶಾಸ್ತ್ರಿಗಳು** ಮೂಲತಃ ಸರಕಾರಿ ಅಧಿಕಾರಿಗಳು ನ್ಯಾಯಸಮ್ಮತವಾದ ದಾಖಲೆಗಳ ಮೇಲ್ವಿಚಾರಕರಾಗಿದ್ದರು (1 ಪೂರ್ವಕಾಲವೃತ್ತಾಂತ 24:6). ಸೆರೆಯಾಗಿ ಹೋಗುವದಕ್ಕಿಂತ ಪೂರ್ವದಲ್ಲಿ ಈ ಪದಕ್ಕೆ ಯಾವುದೇ ರೀತಿಯ ಧಾರ್ಮಿಕ ಅನ್ವಯಿಸುವಿಕೆ ಇರಲಿಲ್ಲ. ಆದಾಗ್ಯೂ, ಸೆರೆಯ ಅವಧಿಯಲ್ಲಿ ವಿಶೇಷ ವಗವದ ಶಾಸ್ತ್ರಿಗಳು ಹುಟ್ಟಿಕೊಂಡರು. ಈ ಜನರು ಧರ್ಮಶಾಸ್ತ್ರವನ್ನು ಅರ್ಥೈಸುವದಕ್ಕೂ ಮತ್ತು ಬೋಧಿಸುವದಕ್ಕೂ ಸಮರ್ಪಿಸಿಕೊಂಡರು: ಎಜ್ರನು ಈ ವಿಧಕ್ಕೆ ಸಂಬಂಧಿಸಿದವನಾಗಿದ್ದನು (ಎಜ್ರನು 7:6, 11, 12; ನೆಹೆಮಿಯಾ 8:1, 4, 9, 13; 12:26, 36). ಶಾಸ್ತ್ರಿಗಳು ವೇದ ವಾಕ್ಯವನ್ನು ಕೈಯಿಂದ ನಕಲು ಮಾಡುವದಕ್ಕೆ ಗಮನೀಯವಾದ ಸಮಯವನ್ನು ವ್ಯಯ ಮಾಡುವದರ ಮೂಲಕ ಜ್ಞಾನವನ್ನು ಸಂಪಾದಿಸಿಕೊಂಡರು (ನೋಡಿರಿ 2:4ರ ಮೇಲಿನ ವ್ಯಾಖ್ಯಾನ).

**ಫರಿಸಾಯರೂ** ಬಂದಿರುವ ನಿರ್ಧಿಷ್ಟವಾದ ಸಮಯ ತಿಳಿದಿಲ್ಲ, ಆದರೆ ಈ ಪಂಗಡವು Antiochus Epiphanes ರವರ ಕ್ರೂರತನದ ಅವಧಿಯಲ್ಲಿ ಕಂಡುಬಂದವು ಎಂದು ತೋರುತ್ತದೆ, ಪ್ರಜಾಪೀಡಕನಾದ ಸಿರಿಯನ್ ಅರಸ ಕ್ರಿ.ಪೂ. ಎರಡನೇ ಶತಮಾನದಲ್ಲಿ ಯೆಹೂದ್ಯ ಧರ್ಮವನ್ನು ನಿರ್ಮೂಲನ ಮಾಡಲು ಪ್ರಯತ್ನಿಸಿದ್ದನು. ಆತನು ಇಸ್ರಾಯೇಲನ್ನು ವಿಶೇಷವಾಗಿ ಯೆಹೂದ್ಯ ಧರ್ಮದ ಕೇಂದ್ರವಾದ ಯೆರೂಸಲೇಮನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದನು.[2] Antiochusನ ದಂಡನ್ನು ಕ್ರಮೇಣವಾಗಿ Maccabean ದಂಗೆಯಿಂದಾಗಿ ಹೊರಹಾಕಲ್ಪಟ್ಟವು. Judas Maccabeusನ ನಾಯಕತ್ವವನ್ನು "The Hammer" ಎಂದು ಕರೆಯುತ್ತಿದ್ದರು ("ಮೆಕ್ಕಾಬಿ ಅಂದರೆ ಅರ್ಥ ಹಾಮ್ಮರ್") (ಸುತ್ತಿಗೆ). ಯೆರೂಸಲೇಮನ್ನು ಮರಳಿ ಪಡೆದುಕೊಂಡರು ಮತ್ತು ದೇವಾಲಯವನ್ನು ಶುದ್ಧೀಕರಿಸಿದರು.[3] ಈ ವಿಶೇಷ ಘಟನೆಗಳ ಸಮಯದಲ್ಲಿ, ಫರಿಸಾಯರು ತಮ್ಮನ್ನು ತಾವು ಇತರ ಯೆಹೂದ್ಯರಿಂದ ಪ್ರತ್ಯೇಕಿಸಿಕೊಂಡರು.

ಅವರು ಧರ್ಮಶಾಸ್ತ್ರವನ್ನು ಚಾಚುತಪ್ಪದೇ ಅನುಸರಿಸಲು ಬದ್ಧರಾಗಿದ್ದರು ಸಹ ಅವರು ಎಂದಿಗೂ ದೊಡ್ಡ ಸಮೂಹವಾಗಿರಲಿಲ್ಲ. ಆದರೂ, ಆ ಸಮಯದಲ್ಲಿ ಅವರು ಜನರಲ್ಲಿ ಪ್ರಭಾವಶಾಲಿಗಳಾದರು (ನೋಡಿರಿ ವ್ಯಾಖ್ಯಾನ 3:7).

ಹೆಚ್ಚಾಗಿ ಶಾಸ್ತ್ರಿಗಳು ಫರಿಸಾಯರರಾಗಿದ್ದರಿಂದ ಶಾಸ್ತ್ರಿಗಳನ್ನು ಫರಿಸಾಯರಿಂದ ಬೇರ್ಪಡಿಸುವದು ಕಷ್ಟಕರವಾಗಿತ್ತು. ಯೇಸು ಆಗಾಗ್ಗೆ ಈ ಸನ್ನಿವೇಶದಲ್ಲಿದ್ದಂತೆ, ಅವರನ್ನು ಒಟ್ಟಾಗಿ ಜೋಡಿಸುತ್ತಿದ್ದನು (5:20; 12:38; 15:1). ಅಧ್ಯಾಯ 23ರಲ್ಲಿ ನೀಡಿರುವ ಅನೇಕ ನಿಂದನೆಗಳ ಕಾರಣದಿಂದಾಗಿ, ನಾವು ಕೆಲವೊಮ್ಮೆ ಶಾಸ್ತ್ರಿಗಳನ್ನು ಮತ್ತು ಫರಿಸಾಯರನ್ನು ದುಷ್ಟರೆಂದು ಒಂದೇ ದೃಢ ಅಭಿಪ್ರಾಯ ಹೊಂದುವಂತಾಗಿದೆ. ಆದರೂ ಅವರಲ್ಲಿ ಕೆಲವರು ದೇವರಿಗೆ ಸಮರ್ಪಿಸಿಕೊಂಡವರಾಗಿದ್ದರು ಮತ್ತು ಅವರು ಯೇಸುವಿನ ಸಂದೇಶಕ್ಕೆ ತಮ್ಮ ಹೃದಯಗಳನ್ನು ತೆರೆದಿಟ್ಟಿದ್ದರು (ಮಾರ್ಕ 12:32-34; ಲೂಕ 7:36; 13:31; ಯೋಹಾನ 3:1, 2; ಅಪೊಸ್ತಲರ ಕೃತ್ಯಗಳು 15:5). ಅಷ್ಟು ಮಾತ್ರವಲ್ಲದೆ, ಯೇಸು ಅವರಲ್ಲಿ ಹೆಚ್ಚಿನವರು, ಅಹಂಕಾರಿಗಳು, ಕಪಟಿಗಳಾದ ಕಾನೂನು ತಜ್ಞರಾಗಿದ್ದಾರೆಂದು ಪ್ರಕಟಿಸುತ್ತಾನೆ.

ಮುಂದೆ ಯೆಹೂದ್ಯ ಗುರುಗಳ ಬರಹಗಳು ಫರಿಸಾಯರಲ್ಲಿರುವ ಕಪಟತನದ ವರ್ತನೆಯನ್ನು ಸೂಚಿಸುತ್ತವೆ. ಯೆರೂಸಲೇಮಿನ Talmud ಏಳು ವಿಧದ ಫರಿಸಾಯರನ್ನು ವರ್ಗೀಕರಿಸಲಾಗಿದೆ:

1. "ಹೆಗಲುಗಳ - ಫರಿಸಾಯರು" "The shoulder-Pharisee" ತಾವು ಮಾಡಿದ ಧಾರ್ಮಿಕ ಕಾರ್ಯಗಳನ್ನು ತಮ್ಮ ಹೆಗಲಿನ ಮೇಲೆ ಹೊತ್ತುಕೊಂಡು ಹೋಗುತ್ತಾರೆ [ಎಲ್ಲರೂ ನೋಡುವದಕ್ಕಾಗಿ].
2. "ಒಂದು ನಿಮಿಷ ಕಾದುಕೊಂಡಿರಿ ಎನ್ನುವ ಫರಿಸಾಯರು" "The wait-a-while Pharisee" - "ಒಂದು ನಿಮಿಷ ಕಾದುಕೊಂಡಿರಿ, ಇದರಿಂದಾಗಿ ನಾನು ಹೋಗಿ ಧಾರ್ಮಿಕ ಕಾರ್ಯಗಳನ್ನು ಮಾಡುವೆನು."
3. "ಲೆಕ್ಕವಿಡುವ ಫರಿಸಾಯರು" "The bookkeeping Pharisee" - ತಾನು ಮಾಡಬೇಕಾಗಿರುವ ಒಂದು ಕಾರ್ಯವನ್ನು ಮಾಡುತ್ತಾನೆ ಮತ್ತು ಒಂದು ಧಾರ್ಮಿಕ ಕರ್ತವ್ಯವನ್ನು ಮಾಡುತ್ತಾನೆ, ಮತ್ತು ನಂತರ ಒಂದನ್ನು ಇನ್ನೊಂದಕ್ಕೆ ಸರಿದೂಗಿಸುತ್ತಾನೆ.
4. "ಕೃಪಣತನದ ಫರಿಸಾಯರು" "The niggardly Pharisee" - "ನಾನು ಹೇಗೆ ರಕ್ಷಣೆ ಹೊಂದಬೇಕು ಎಂಬುದನ್ನು ತೋರಿಸುತ್ತೇನೆ, ಇದರಿಂದಾಗಿ ನಾನು ಧಾರ್ಮಿಕ ಕಾರ್ಯಗಳನ್ನು ಮಾಡಬಹುದು."
5. "ನಾನು ಏನು ತಪ್ಪು ಮಾಡಿದ್ದೇನೆ ಎನ್ನುವದನ್ನು ತೋರಿಸುತ್ತದೆ ಎನ್ನುವ ಫರಿಸಾಯರು" "The show-me-what-I-did-wrong Pharisee" - "ನಾನು ಏನು ಪಾಪ ಮಾಡಿದ್ದೇನೆ ಎಂಬುದನ್ನು ತೋರಿಸುತ್ತದೆ, ಮತ್ತು ನಾನು ಅದಕ್ಕೆ ಸರಿಸಮವಾದ ಧಾರ್ಮಿಕ ಕರ್ತವ್ಯವನ್ನು ಮಾಡುತ್ತೇನೆ."
6. "ಭಯ ಮುಕ್ತರಾದ ಫರಿಸಾಯರು" "A Pharisee-out-of-fear," ಅವರು ದೇವರಿಗೆ ಭಯಪಡುವವರು.
7. "ಪ್ರೀತಿಸುವ ಫರಿಸಾಯರು" "A Pharisee-out-of-love," ಅಂದರೆ, ದೇವರನ್ನು ಪ್ರೀತಿಸುವವರು.[4]

ಶಾಸ್ತ್ರಿಗಳು ಮತ್ತು ಫರಿಸಾಯರು ತಮ್ಮನ್ನು ತಾವು **ಮೋಶೆಯ** [*kathedra*] **ಪೀಠದಲ್ಲಿ ಕೂತುಕೊಂಡಿದ್ದಾರೆ;** ಯೆಹೂದ್ಯ ಗುರುಗಳು ಬೋಧನೆ ಮಾಡುವಾಗ ಸಂಪ್ರದಾಯಿಕವಾಗಿ

ಕೂತುಕೊಳ್ಳುತ್ತಿದ್ದರು (ನೋಡಿರಿ 5:1; 13:2; 24:3; 26:55; ಲೂಕ 4:20). ಕೆಲವೊಂದು ದೇವಾಲಯಗಳಲ್ಲಿ "ಮೋಶೆಯ ಪೀಠ" ಎಂದು ಕರೆಯಲ್ಪಡುವ ಖುರ್ಚಿ ನಿಜವಾಗಿಯೂ ಇದ್ದವು. ಇಂಥಹ ಖುರ್ಚಿಗಳನ್ನು ಅಮೃತ ಶಿಲೆ ಅಥವಾ ಕಲ್ಲಿನಿಂದ ಮಾಡುತ್ತಿದ್ದರು. ಇವು ಅನೇಕ ಸ್ಥಳಗಳಲ್ಲಿ ಕಂಡುಬರುತ್ತಿದ್ದವು. ಸಿರಿಯಾದಲ್ಲಿರುವ ಗ್ರೀಕ್ ದ್ವೀಪವಾದ Delos, Dura Europas in Syria, ಮತ್ತು Hammat Tiberias, Chorazin, ಮತ್ತು En Gedi in Israel ಈ ಸ್ಥಳಗಳಲ್ಲಿ ಕಂಡುಬರುತ್ತವೆ.[5] ಮೋಶೆಯ ಪೀಠದಲ್ಲಿ ಕುಳಿತುಕೊಳ್ಳುವ ಯೆಹೂದಿ ಗುರುಗಳನ್ನು ಗೌರವಿಸುತ್ತಿದ್ದರು, ಸಭೀಕರಿಗೆ ಬೋಧಿಸುವಾಗ ಕುಳಿತುಕೊಳ್ಳುವ ಧಾರ್ಮಿಕ ಅಧಿಕಾರವನ್ನು ಹೊಂದಿರುವದನ್ನು ಗುರುತಿಸುವ ಪೀಠ. ಇಂಥಹಾ ಒಂದು ನೇಮಕಾತಿಗೆ ಹಳೆ ಒಡಂಬಡಿಕೆಯಲ್ಲಿ ಯಾವುದೇ ಸೂಚನೆಯನ್ನು ನೀಡಿಲ್ಲ. ಆದರೂ ದೇವರ ವಾಕ್ಯದೊಂದಿಗೆ ಸಂಬಂಧವನ್ನು ಹೊಂದಿರುವ ಯಾವುದೇ ಯೆಹೂದ್ಯರ ಬೋಧನೆಯನ್ನು ಗುರುತಿಸುತ್ತಿದ್ದನು ಮತ್ತು ಗೌರವಿಸುತ್ತಿದ್ದನು.

**ವಚನ 3.** ಯೇಸು ಜನಸಮೂಹಕ್ಕೆ ಮತ್ತು ತನ್ನ ಶಿಷ್ಯರಿಗೆ ಶಾಸ್ತ್ರಿಗಳು ಮತ್ತು ಫರಿಸಾಯರು ಹೇಳುವದನ್ನು **ಕೇಳಿರಿ** ಮತ್ತು ಅವರು ಬೋಧಿಸುವದನ್ನು ಆಚರಿಸಿರಿ, ಆದರೆ **ಅವರ ನಡತೆಯ ಪ್ರಕಾರ ನಡೆಯಬೇಡಿರಿ** ಎಂದು ಹೇಳಿದನು. ಯೇಸು ಅನೇಕಾವರ್ತಿ ಫರಿಸಾಯರ ಬೋಧನೆಗಳನ್ನು ವಿರೋಧಿಸುತ್ತಿದ್ದನು (5:17-48; 12:1-8; 15:1-20; 16:5-12; 19:1-12). ಆದದರಿಂದ, ಆತನು ಅವರ ಬೋಧನೆಯಂತೆ ನಡೆದುಕೊಳ್ಳಿರಿ ಎಂದು ಹೇಳುವಾಗ, ಇದರ ಅರ್ಥ ಅವರ ಸೂಚನೆಗಳು ಮೋಶೆಯ ಧರ್ಮಶಾಸ್ತ್ರಕ್ಕೆ ಅನುಗುಣವಾಗಿ ಇರುವಾಗ ಮಾತ್ರ ಅವರು ಅವುಗಳಿಗೆ ವಿಧೇಯರಾಗಬೇಕು ಎಂದು ಹೇಳಿದನು.

"ಕಪಟಿಗಳು" ಎನ್ನುವದಕ್ಕೆ ಉತ್ತಮವಾದ ವ್ಯಾಖ್ಯಾನ, **ಅವರು ಹೇಳುತ್ತಾರೇ ಹೊರತು ನಡೆಯುವದಿಲ್ಲ** ಎಂದು ಯೇಸುವಿನಿಂದ ಕೊಡಲ್ಪಟ್ಟಿದೆ. NIVಯಲ್ಲಿ, "ಅವರು ಬೋಧಿಸಿದ್ದನ್ನು ಅವರು ಮಾಡುವದಿಲ್ಲ" ಎಂದು ಅನುವಾದಿಸಲಾಗಿದೆ. ಈ ಮುಖ್ಯ ವಿಷಯವನ್ನು ಮನಸ್ಸಿನಲ್ಲಿಟ್ಟುಕೊಂಡು ಪೌಲನು ಹೀಗೆ ಬರೆದಿದ್ದಾನೆ,

> ನೀನು ಯೆಹೂದ್ಯನೆನಿಸಿಕೊಂಡವನೂ ಧರ್ಮಶಾಸ್ತ್ರದಲ್ಲಿ ಭರವಸವಿಟ್ಟವನೂ ದೇವರ ವಿಷಯವಾಗಿ ಹೊಗಳಿಕೊಳ್ಳುವವನೂ ಆತನ ಚಿತ್ತವನ್ನು ಬಲ್ಲವನೂ ಧರ್ಮಶಾಸ್ತ್ರದಿಂದ ಉಪದೇಶವನ್ನು ಹೊಂದಿ ಇದು ತಕ್ಕದ್ದು ಅದು ತಕ್ಕದ್ದಲ್ಲವೆಂದು ವಿವೇಚಿಸುವವನೂ ಆಗಿದ್ದೀ. ಧರ್ಮಶಾಸ್ತ್ರದಲ್ಲಿ ಜ್ಞಾನಸತ್ಯಗಳ ಸ್ವರೂಪವೇ ನನಗೆ ಇರುವದರಿಂದ ಕುರುಡರಿಗೆ ದಾರಿ ತೋರಿಸುವವನೂ ಕತ್ತಲೆಯಲ್ಲಿರುವವನಿಗೆ ಬೆಳಕೂ ತಿಳುವಳಿಕೆಯಿಲ್ಲದವರಿಗೆ ಶಿಕ್ಷಕನೂ ಬಾಲಕರಿಗೆ ಉಪಾಧ್ಯಾಯನೂ ಆಗಿದ್ದೇನೆಂದು ನಂಬಿಕೊಂಡಿದ್ದೀ. ಹೀಗಿರಲಾಗಿ ಮತ್ತೊಬ್ಬನಿಗೆ ಉಪದೇಶಮಾಡುವ ನೀನು ನಿನಗೆ ಉಪದೇಶಮಾಡಿಕೊಳ್ಳದೆ ಇದ್ದೀಯೋ? ಕದಿಯಬಾರದೆಂದು ಬೋಧಿಸುವ ನೀನು ಕದಿಯುತ್ತೀಯೋ? ಹಾದರ ಮಾಡಬಾರದೆಂದು ಹೇಳುವ ನೀನು ಹಾದರ ಮಾಡುತ್ತೀಯೋ? ಮೂರ್ತಿಗಳಲ್ಲಿ ಅಸಹ್ಯಪಡುತ್ತಿರುವ ನೀನು ದೇವಸ್ಥಾನದಲ್ಲಿ ಕಳ್ಳತನ ಮಾಡುತ್ತೀಯೋ? ಧರ್ಮಶಾಸ್ತ್ರದಲ್ಲಿ ಅಭಿಮಾನಿಯಾಗಿರುವ ನೀನು ಧರ್ಮಶಾಸ್ತ್ರವನ್ನು ಮೀರಿ ನಡೆದು ದೇವರನ್ನು ಅವಮಾನಪಡಿಸುತ್ತೀಯೋ (ರೋಮಾಪುರ 2:17-23).

**ವಚನ 4.** ಯೇಸು ಶಾಸ್ತ್ರಿಗಳ ಮತ್ತು ಫರಿಸಾಯರ ಕಪಟತನದ ಕುರಿತು ಹಲವು ಉದಾಹರಣೆಗಳನ್ನು ಒದಗಿಸುತ್ತಾನೆ. ಮೊದಲನೆಯದಾಗಿ, **ಅವರು ಭಾರವಾದ ಹೊರೆಗಳನ್ನು[6] ಕಟ್ಟಿ ಜನರ ಹೆಗಲಿನ ಮೇಲೆ ಹೊರಿಸುತ್ತಾರೆ; ತಾವಾದರೋ ಬೆರಳಿನಿಂದಲಾದರೂ ಅವುಗಳನ್ನು ಮುಟ್ಟಲೊಲ್ಲರು.** ಈ ಕಲ್ಪನೆಯ ಹಿನ್ನೆಲೆ ಈ ಕಾಲದ ಸಾಮಾನ್ಯ ಜೀವಿತವಾಗಿದೆ. Leon Morris ರವರು ಈ ರೀತಿಯಾಗಿ ವರ್ಣಿಸುತ್ತಾರೆ:

ಭಾರವಾದ ಹೊರೆಗಳನ್ನು ಕಟ್ಟುವದು ಪ್ರಾಣಿಗಳು ಅಥವಾ ಗುಲಾಮರು *ಭಾರವನ್ನು* ಹೊರುವದಕ್ಕೆ ಸಿದ್ಧತೆಯನ್ನು ಮಾಡಿಕೊಳ್ಳುವದನ್ನು ಸೂಚಿಸುತ್ತದೆ; ಭಾರವುಳ್ಳವುಗಳನ್ನು ಹೊರುವ ಪೂರ್ವದಲ್ಲಿ ಅವುಗಳನ್ನು ಸುರಕ್ಷಿತವಾಗಿ ಕಟ್ಟಬೇಕು. ಆದರೆ ಇದನ್ನು ನಿರ್ಲಕ್ಷತನದಿಂದ ಮಾಡುತ್ತಿದ್ದರು, ಇಂತಹ ಸಂದರ್ಭದಲ್ಲಿ ಹೊರೆಗಳು ಭಾರವಾಗುತ್ತಿದ್ದವು ಮತ್ತು ಎತ್ತುಕೊಳ್ಳಲು ಸಾಧ್ಯವಿರಲಿಲ್ಲ ಅಲ್ಲದೆ ಹೊತ್ತುಕೊಳ್ಳಲು ಅಸಹ್ಯವಾಗಿದ್ದು ಬಹಳ ಭಾರವಾಗಿರುತ್ತಿದ್ದವು.[7]

"ಭಾರವಾದ ಹೊರೆಗಳು" ಅವರು ಧರ್ಮಶಾಸ್ತ್ರದಲ್ಲಿ ಸೇರಿಸಿದ ಅನೇಕ ಕಾಯ್ದೆ ಕಾನೂನುಗಳು ಮತ್ತು ನಿರ್ಭಂದಗಳು. ಈ ಬಾಯಿಮಾತಿನ ನಿಯಮಗಳು ಅನೇಕ ಯೆಹೂದ್ಯರು ಅವು ದೈವೀಕ ಮೂಲದವುಗಳು ಎಂದು ನಂಬುತ್ತಿದ್ದರು, ಅವರು ಧರ್ಮಶಾಸ್ತ್ರಕ್ಕಿಂತ ಬಹಳ ಭಾರವಾದವುಗಳಾಗಿದ್ದವು (ನೋಡಿರಿ ಅಪೊಸ್ತಲರ ಕೃತ್ಯಗಳು 15:10). ಉದಾಹರಣೆಗೆ, "ಸಬ್ಬತ್ ದಿನವನ್ನು ಪರಿಶುದ್ಧ ದಿನವನ್ನಾಗಿ ಆಚರಿಸಲು ಜ್ಞಾಪಕದಲ್ಲಿಟ್ಟುಕೊಳ್ಳಿರಿ" (ವಿಮೋಚನಕಾಂಡ 20:8). ಇದು ಪ್ರಾಮುಖ್ಯವಾದ ಮತ್ತು ಸರಳವಾದ ಹೇಳಿಕೆಯಾಗಿದೆ.[8] ಯೆಹೂದಿ ಗುರುಗಳು ಏಳನೆಯ ದಿನವನ್ನು ವಿಶ್ರಾಂತಿ ದಿನವನ್ನಾಗಿ ಕ್ರಮಪಡಿಸಲು ಸಂಪುಟಗಳನ್ನು ಸೃಷ್ಟಿಸಿದ್ದರು. ಯೇಸು ಮತ್ತು ಆತನ ಶಿಷ್ಯರು ಸಬ್ಬತ್ತಿನ ನಿಯಮವನ್ನು ಮೀರಿದ್ದಾರೆಂದು ಟೀಕಿಸಿದಾಗ, ಟೀಕೆ ಮಾಡುವವರು ದೇವರ ಧರ್ಮಶಾಸ್ತ್ರವನ್ನು ಉಲ್ಲೇಖಿಸಲಿಲ್ಲ ಬದಲಾಗಿ ಅನೇಕ ಶತಮಾನಗಳಿಂದ ಬೆಳೆಸುತ್ತಾ ಬಂದ ಮಾನವ ನಿರ್ಮಿತ ಸಂಪ್ರದಾಯಗಳನ್ನು ಉಲ್ಲೇಖಿಸಿದರು (12:1-8; ನೋಡಿರಿ ಯೋಹಾನ 5:5-13). ಈ ನಿಯಮಗಳಲ್ಲಿ ಒಂದನ್ನಾದರೂ ಉಲ್ಲಂಘಿಸಿದ್ದಲ್ಲಿ ಜನರಿಗೆ ದಂಡನೆಯನ್ನು ನೀಡುತ್ತಿದ್ದರು, ಆದಾಗ್ಯೂ ನಿಯಮಪರವಾದ ಇವರು ತಮ್ಮ ಬೆರಳಿನಿಂದಲಾದರೂ ಅವುಗಳಲ್ಲಿ ಒಂದನ್ನಾದರೂ ಮುಟ್ಟಲೊಲ್ಲರು. ಅವರು ತಾವೇ ಮಾಡುವದಕ್ಕಿಂತ ಏನನ್ನು ಮಾಡಬೇಕು ಎಂದು ಇತರರಿಗೆ ಹೇಳುವದರಲ್ಲಿ ನಿಪುಣರಾಗಿದ್ದರು.

ಕಟ್ಟುವದು ಮತ್ತು ಬಿಚ್ಚುವದು ಈ ವಿಚಾರ ಮತ್ತಾಯನ ಸುವಾರ್ತೆಯಲ್ಲಿ ಹಿಂದೆಯೇ ಕಂಡುಬರುತ್ತದೆ, ಪೇತ್ರನು ಮತ್ತು ಇತರ ಅಪೊಸ್ತಲರು (ನೋಡಿರಿ 16:19; 18:18ರ ಮೇಲಿನ ವ್ಯಾಖ್ಯಾನ). ಇಲ್ಲಿ ಮುಖ್ಯವಾದ ವ್ಯತ್ಯಾಸವೆಂದರೆ ಅಪೊಸ್ತಲರು ಕಟ್ಟುವ ನಿಯಮಗಳು ಪವಿತ್ರಾತ್ಮನ ಪ್ರೇರಿತವಾದವುಗಳು. ಅದೇ ಸಮಯದಲ್ಲಿ ಫರಿಸಾಯರ ನಿಯಮಗಳು ಮಾನವ ನಿರ್ಮಿತವಾದವುಗಳು. ಯೇಸು ಯೆಹೂದಿ ನಾಯಕರಿಗಿಂತ ಬಹಳ ಭಿನ್ನವಾಗಿದ್ದಾನೆ. ಅವರ ಹೊರೆಗಳು ಕಠಿಣ ಮತ್ತು ಭಾರವಾದವುಗಳು, ಆದರೆ ಯೇಸು ಸ್ಪಷ್ಟವಾಗಿ, ಯೇಸು ಸ್ಪಷ್ಟವಾಗಿ, "ನನ್ನ ನೊಗವು ಮೃದುವಾದದ್ದು; ನನ್ನ ಹೊರೆಯ ಹೌರವಾದದ್ದು ಅಂದನು" (11:30).

## ಇತರರಿಗೆ ಪ್ರಭಾವ ಬೀರಲು ನಮ್ಮ ನೀತಿಯತೆಯನ್ನು ಪ್ರದರ್ಶಿಸಬೇಕು (23:5-12)

**5ಅವರು ತಮ್ಮ ಕೆಲಸಗಳನ್ನೆಲ್ಲಾ ಜನರಿಗೆ ಕಾಣಬೇಕೆಂದು ಮಾಡುತ್ತಾರೆ. ತಾವು ಕಟ್ಟಿಕೊಳ್ಳುವ ಜ್ಞಾಪಕ ಪಟ್ಟಿಗಳನ್ನು ಅಗಲಮಾಡುತ್ತಾರೆ, ಗೊಂಡೆಗಳನ್ನು ಉದ್ದಮಾಡುತ್ತಾರೆ.
6ಇದಲ್ಲದೆ ಔತಣಪ್ರಸ್ತಗಳಲ್ಲಿ ಪ್ರಥಮಸ್ಥಾನ, ಸಭಾಮಂದಿರಗಳಲ್ಲಿ ಮುಖ್ಯ ಪೀಠಗಳು, 7ಅಂಗಡೀ
ಬೀದಿಗಳಲ್ಲಿ ನಮಸ್ಕಾರಗಳು, ಜನರಿಂದ ಬೋಧಕರನ್ನಿಸಿಕೊಳ್ಳುವದು, ಇವುಗಳೇ ಅವರಿಗೆ
ಇಷ್ಟ. 8ಆದರೆ ನೀವು ಬೋಧಕರನ್ನಿಸಿಕೊಳ್ಳಬೇಡಿರಿ; ಒಬ್ಬನೇ ನಿಮ್ಮ ಬೋಧಕನು, ನೀವೆಲ್ಲರು
ಸಹೋದರರು. 9ಇದಲ್ಲದೆ ಭೂಲೋಕದಲ್ಲಿ ಯಾರನ್ನೂ ನಮ್ಮ ತಂದೆ ಎಂದು ಕರೆಯಬೇಡಿರಿ;
ಪರಲೋಕದಲ್ಲಿರುವಾತನೊಬ್ಬನೇ ನಿಮಗೆ ತಂದೆ. 10ಮತ್ತು ಗುರುಗಳು ಅನ್ನಿಸಿಕೊಳ್ಳಬೇಡಿರಿ;
ಕ್ರಿಸ್ತನೊಬ್ಬನೇ ನಿಮಗೆ ಗುರುವು. 11ನಿಮ್ಮಲ್ಲಿ ಹೆಚ್ಚಿನವನು ನಿಮ್ಮ ಸೇವಕನಾಗಿರಬೇಕು.**

**[12]ತನ್ನನ್ನು ಹೆಚ್ಚಿಸಿಕೊಳ್ಳುವವನು ತಗ್ಗಿಸಲ್ಪಡುವನು, ತನ್ನನ್ನು ತಗ್ಗಿಸಿಕೊಳ್ಳುವವನು ಹೆಚ್ಚಿಸಲ್ಪಡುವನು.**

**ವಚನ 5.** ಪರ್ವತ ಪ್ರಸಂಗದಲ್ಲಿ, ಫರಿಸಾಯರ ಸ್ವ-ಬಡ್ತಿಯ ಕುರಿತು ಯೇಸು ಮೂರು ಉದಾಹರಣೆಗಳನ್ನು ಹೇಳಿದ್ದಾನೆ: ಕೊಡುವದು, ಪ್ರಾರ್ಥಿಸುವದು, ಮತ್ತು ಉಪವಾಸ ಮಾಡುವದು (6:1-18). ಅವರು ತಮ್ಮ ಕೆಲಸಗಳನ್ನೆಲ್ಲಾ **ಜನರಿಗೆ ಕಾಣಬೇಕೆಂದು ಮಾಡುತ್ತಾರೆ** ಎನ್ನುವ ವಿಷಯದಲ್ಲಿ ಇನ್ನು ಇತರೆ ಉದಾಹರಣೆಗಳನ್ನು ಹೇಳಿದ್ದಾನೆ.

**ತಾವು ಕಟ್ಟಿಕೊಳ್ಳುವ ಜ್ಞಾಪಕ ಪಟ್ಟಿಗಳನ್ನು ಅಗಲಮಾಡುತ್ತಾರೆ, ಗೊಂಡೆಗಳನ್ನು ಉದ್ದಮಾಡುತ್ತಾರೆ.** "ಜ್ಞಾಪಕ ಪಟ್ಟಿಗಳು" ವಾಕ್ಯಭಾಗವನ್ನು ಒಳಗೊಂಡ ಸಣ್ಣ ಪೆಟ್ಟಿಗೆಗಳು, ಅದನ್ನು ಯೆಹೂದ್ಯರು ತಮ್ಮ ಹಣೆಯ ಮೇಲೆ ಮತ್ತು ಎಡಗೈ ತೋಳಿನ ಮೇಲೆ ಕಟ್ಟಿಕೊಳ್ಳುತ್ತಾರೆ. Michael J. Wilkins ರವರು ಎರಡು ಅಖಂಡವಾಗಿರುವ ಜ್ಞಾಪಕಪಟ್ಟಿಗಳ ವಿಷಯದಲ್ಲಿ, ಮತ್ತು Qumran in Cave 1ರಲ್ಲಿ ಸಂಶೋಧಿಸಲಾದ ಇತರ ಅವಶೇಷಗಳ ಕುರಿತು ಈ ರೀತಿಯಾಗಿ ವರ್ಣಿಸುತ್ತಾರೆ. ಅದರಲ್ಲಿ ಒಂದು ವಿಧ ನಾಲ್ಕು ಸಣ್ಣ ಸುರುಳಿಗಳನ್ನು ಇಡಲು ನಾಲ್ಕು ಅಂಕಣಗಳನ್ನು ಹೊಂದಿರುತ್ತದೆ ಮತ್ತು ಒಂದು ಅಂಗುಲ ಉದ್ದವಾಗಿರುತ್ತದೆ. ಇವುಗಳ ಮೇಲೆ ವಿಮೋಚನಕಾಂಡ 13:9, 16; ಧರ್ಮೋಪದೇಶ ಕಾಂಡ 6:8; 11:18 ಕ್ರಮವಾಗಿ ಬರೆಯಲಾಗಿತ್ತು. ಈ ರೀತಿಯ ಜ್ಞಾಪಕ ಪಟ್ಟಿಯನ್ನು ಹಣೆಯ ಮೇಲೆ ಕಟ್ಟಿಕೊಳ್ಳುತ್ತಾರೆ. ಇನ್ನೊಂದು 1/3 ಅಂಗುಲ ಇರುತ್ತದೆ ಮತ್ತು ಒಂದೇ ಅಂಕಣವನ್ನು ಹೊಂದಿರುತ್ತದೆ. ಒಂದು ಚಿಕ್ಕ ಸುರುಳಿಯಲ್ಲಿ ನಾಲ್ಕು ವಚನಗಳು ಅತೀ ಚಿಕ್ಕ ಲಿಪಿಯಲ್ಲಿ ಬರೆಯಲ್ಪಟ್ಟಿರುತ್ತವೆ. ಈ ಜ್ಞಾಪಕಪಟ್ಟಿಯನ್ನು ಎಡಗೈ ತೋಳಿನ ಮೇಲೆ ಕಟ್ಟಿಕೊಳ್ಳುತ್ತಾರೆ.[9]

"ಜ್ಞಾಪಕಪಟ್ಟಿ" (*phulaktērion*) ಎನ್ನುವ ಪದದ ಅರ್ಥ "ಸರಕ್ಷತೆ" ಅಥವಾ "ತಾಯಿತ." ಇನ್ನೂ ಎರಡು ಪದಗಳು ಜೊತೆಯಾಗುತ್ತವೆ ಅವು *tefillin* ಎಂದರೆ, "ಪ್ರಾರ್ಥನೆ" *totaphoth,* ಎನ್ನುವ ಪದವನ್ನು ಧರ್ಮೋಪದೇಶ ಕಾಂಡ 6:8 ಮತ್ತು 11:18ರಲ್ಲಿ "ಹಣೆಪಟ್ಟಿ" ಎಂದು ಅನುವಾದಿಸಲಾಗಿದೆ. ಈ ವಸ್ತುಗಳನ್ನು ಕಟ್ಟಿಕೊಳ್ಳುವ ಅಭ್ಯಾಸವು ಯೆಹೂದಿ ಗುರುಗಳು ವೇದವಾಕ್ಯವು ದೇವರ ಧರ್ಮಶಾಸ್ತ್ರವನ್ನು ತಮ್ಮ ಕೈಗಳ ಮೇಲೆ ಮತ್ತು ಹಣೆಗಳ ಮೇಲೆ ಕಟ್ಟಿಕೊಳ್ಳಬೇಕೆಂಬುದನ್ನು ವಾಸ್ತವವಾಗಿ ಅರ್ಥೈಸಿರುವದರ ಪರಿಣಾಮವಾಗಿದೆ.[10] ಇವು ದೇವರ ವಾಕ್ಯವು ಯಾವಾಗಲೂ ದೇವರ ಜನರ ಮುಂದೆ - ಅವರ ಹೃದಯ ಮತ್ತು ಮನಸ್ಸಿನಲ್ಲಿ ಇರಬೇಕು ಎಂಬುದಕ್ಕೆ ನಿಜವಾಗಿ ಸಾಂಕೇತಿಕವಾದ ಹೇಳಿಕೆಗಳಾಗಿವೆ. ತಮ್ಮ ಹಣೆಪಟ್ಟಿಗಳನ್ನು ಅಗಲವಾಗಿ ಮಾಡಿಕೊಳ್ಳುವದರಿಂದ, ಕೆಲವು ಯೆಹೂದ್ಯರು ತಾವು ದೇವರಿಗೆ ವಿಶೇಷವಾದ ಸಮರ್ಪಣೆಯನ್ನು ಹೊಂದಿದ್ದೇವೆಂದು ತೋರಿಸುತ್ತಿದ್ದರು. ಇಂದೂ ಸಹ, ಸಾಂಪ್ರದಾಯಿಕ ಯೆಹೂದ್ಯರು ಮುಂಜಾನೆಯ ಪ್ರಾರ್ಥನೆಯ ಸಮಯದಲ್ಲಿ ಮತ್ತು ಇತರ ಸಮಯಗಳಲ್ಲಿ ಚರ್ಮದ ಚೀಲಗಳನ್ನು ತಮ್ಮ ಹಣೆಗೆ ಮತ್ತು ತೋಳುಗಳಿಗೆ ಕಟ್ಟಿಕೊಳ್ಳುತ್ತಾರೆ.

"ಗೊಂಡೆಗಳನ್ನು" ದೇವರ ಆಜ್ಞೆಗಳಿಗೆ ವಿಧೇಯರಾಗುವದರ ಮತ್ತು ಪರಿಶುದ್ಧರಾಗಿರುವದರ ಜ್ಞಾಪಕಾರ್ಥಕವಾಗಿ ಹಾಕಿಕೊಳ್ಳುತ್ತಿದ್ದರು. ಈ "ಗೊಂಡೆಗಳನ್ನು" ಅಥವಾ "ಅಂಚುಗಳು" (NRSV), ಮೇಲಂಗಿಯ ತುದಿಗೆ ದೇವರ ಸೂಚನೆಯನ್ನು ಅನುಸರಿಸುವದಕ್ಕಾಗಿ ಕಟ್ಟಿಕೊಳ್ಳುತ್ತಿದ್ದರು (ಅರಣ್ಯಕಾಂಡ 15:38-40; ಧರ್ಮೋಪದೇಶಕಾಂಡ 22:12). ಯೇಸು ತಾನೇ ಅದನ್ನು ಹಾಕಿಕೊಳ್ಳುತ್ತಿದ್ದನು (9:20; 14:36). ಕಪಟಿಗಳಾದ ಫರಿಸಾಯರು, ತಮಗೆ ದೇವರ ಧರ್ಮಶಾಸ್ತ್ರವನ್ನು ಜ್ಞಾಪಿಸಲೆಂದು ಹಾಕಿಕೊಳ್ಳುತ್ತಿರಲಿಲ್ಲ; ಬದಲಾಗಿ, ಇತರರ ಗಮನವನ್ನು ತಮ್ಮೆಡೆಗೆ ಸೆಳೆದುಕೊಳ್ಳುವದಕ್ಕಾಗಿ ಮತ್ತು ಇತರರಿಗೆ ತಮ್ಮ ವಯಕ್ತಿಕ ಪರಿಶುದ್ಧತೆಯನ್ನು ಜ್ಞಾಪಿಸುವದಕ್ಕಾಗಿ ಹಾಕಿಕೊಳ್ಳುತ್ತಿದ್ದರು. ಗೊಂಡಿಗಳು ಉದ್ದವಾಗಿರುವ

ಹಾಗೆ, ವ್ಯಕ್ತಿ ಹೆಚ್ಚು ಪರಿಶುದ್ಧನು ಎಂದು ಊಹಿಸಿಕೊಳ್ಳಲಾಗುತಿತ್ತು. ಇಂದು ಕೆಲವು ಧಾರ್ಮಿಕ ನಾಯಕರ ವೇಷಭೂಷಣಗಳು ಇದಕ್ಕೆ ಸರಿಸಮನಾಗಿವೆ.

**ವಚನ 6.** ಇದರೊಟ್ಟಿಗೆ ಯೇಸು, **ಔತಣಪ್ರಸ್ತಗಳಲ್ಲಿ ಪ್ರಥಮಸ್ಥಾನ, ಸಭಾಮಂದಿರಗಳಲ್ಲಿ ಮುಖ್ಯ ಪೀಠಗಳು** ಬಯಸುವರು ಎಂದು ಹೇಳಿದನು. ಔತಣದಲ್ಲಿ ಅತಿಥಿಗಳು ತಮ್ಮ ಸಾಮಾಜಿಕ ಪ್ರಾಮುಖ್ಯತೆಗೆ ಅನುಗುಣವಾಗಿ ಇಳಿಕೆ ಕ್ರಮದಲ್ಲಿ ಕುಳಿತುಕೊಳ್ಳುವದು ಸಂಪ್ರದಾಯವಾಗಿತ್ತು.[11] ಇನ್ನೊಂದು ಸಂದರ್ಭದಲ್ಲಿ ಯೇಸು ಗೌರವದ ಸ್ಥಾನವನ್ನು ಬಯಸುವದರ ಅಪಾಯದ ಕುರಿತು ಎಚ್ಚರಿಸಲು ಒಂದು ಸಾಮ್ಯವನ್ನು ಉಪಯೋಗಿಸುತ್ತಾನೆ. ಒಂದು ವೇಳೆ ಒಬ್ಬನು ಮದುವೆಯ ಔತಣದಲ್ಲಿ ತನ್ನಷ್ಟಕ್ಕೆ ತಾನೇ ಗೌರವದ ಸ್ಥಾನವನ್ನು ಆಯ್ದುಕೊಂಡಿರುವಾಗ ಇನ್ನೊಬ್ಬನಿಗಾಗಿ ಈ ಸ್ಥಳವನ್ನು ಬಿಟ್ಟುಕೊಡು ಎಂದು ಕೇಳುವಾಗ ಇದು ಅತ್ಯಂತ ಅವಮಾನ ತರುವಂಥದ್ದಾಗಿರುತ್ತದೆ. ಒಬ್ಬನನ್ನು ಒಂದು ಸ್ಥಳದಿಂದ ಇನ್ನೊಂದು ಗೌರವದ ಸ್ಥಳಕ್ಕೆ ಕೂತುಕೋ ಎಂದು ಕೇಳಿಕೊಳ್ಳುವಾಗ ಅದು ಅವನಿಗೆ ಗೌರವವನ್ನು ತರುವಂಥದ್ದಾಗಿರುತ್ತದೆ (ಲೂಕ 14:7-11). ಯಾರು ತಮ್ಮನ್ನು ತಾವು ಹೆಚ್ಚಿಸಿಕೊಳ್ಳಲು ಬಯಸುತ್ತಾರೋ ಅವರು ತಗ್ಗಿಸಲ್ಪಡುತ್ತಾರೆ, ಯಾರು ತಮ್ಮನ್ನು ತಾವು ತಗ್ಗಿಸಿಕೊಳ್ಳುತ್ತಾರೋ ಅವರು ಹೆಚ್ಚಿಸಲ್ಪಡುತ್ತಾರೆ (23:11, 12). ಯಾಕೋಬ ಮತ್ತು ಯೋಹಾನ ದೇವರ ರಾಜ್ಯದಲ್ಲಿ ಯೇಸುವಿನ ಬಲಗಡೆ ಮತ್ತು ಎಡಗಡೆ ಕುಳಿತುಕೊಳ್ಳುವ ಸ್ಥಾನವನ್ನು ಅಪೇಕ್ಷಿಸಿದರು, ಆದರೆ ಆತನು ಅವರ ಸ್ವಾರ್ಥಪರ ಬೇಡಿಕೆಗಾಗಿ ಗದರಿಸಿದನು (20:20-23).

ಪ್ರಾಚೀನ ಸಭಾಮಂದಿರಗಳಲ್ಲಿ ಮುಂದಿನ ಭಾಗದಲ್ಲಾಗಲಿ ಅಥವಾ ಕಟ್ಟಡದ ಮಧ್ಯದಲ್ಲಾಗಲಿ ಕಟ್ಟೆಗಳನ್ನು ಕಟ್ಟುತ್ತಿದ್ದರು. ಈ ಕಟ್ಟೆಗಳ (*bēma*) ಮೇಲೆ ಸಾಮಾನ್ಯವಾಗಿ ವೇದವಾಕ್ಯವನ್ನು ಓದುವದಕ್ಕೆ ಸುರುಳಿಗಳನ್ನು ಹರಡುತ್ತಿದ್ದರು (ಲೂಕ 4:16, 17), ಮೋಶೆಯ ಪೀಠ (23:2), ಮತ್ತು "ಮುಖ್ಯ ಪೀಠ" ಇವುಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ. ಈ ಸ್ಥಾನಗಳಲ್ಲಿ ಆರಾಧನೆಯಲ್ಲಿ ಭಾಗ ತೆಗೆದುಕೊಳ್ಳುವವರು ಮತ್ತು ಪ್ರಖ್ಯಾತ ನಾಯಕರು ಕುಳಿತುಕೊಳ್ಳುತ್ತಿದ್ದರು. ಸಾಂಕೇತಿಕವಾಗಿ, ಸಭಾಮಂದಿರದ ಗೋಡೆಗಳ ಸುತ್ತಲೂ ಕೆಳಮಟ್ಟದ ಆಸನಗಳು ಸಭೀಕರ ಉಪಯೋಗಕ್ಕಾಗಿ ಸ್ಥಾಪಿತವಾಗಿದ್ದವು.[12] ಯಾರು ಎಲ್ಲರ ಗಮನವನ್ನು ಸೆಳೆಯಬೇಕೆಂಬ ಉದ್ದೇಶದಿಂದ ಎಲ್ಲರೂ ನೋಡಲೆಂದು ಮುಖ್ಯ ಆಸನದ ಮೇಲೆ ಕುಳಿತುಕೊಳ್ಳುತ್ತಾರೋ ಅವರನ್ನು ಯೇಸು ಖಂಡಿಸುತ್ತಾನೆ.

**ವಚನ 7.** ಶಾಸ್ತ್ರಿಗಳು ಮತ್ತು ಫರಿಸಾಯರಿಗೆ, **ಅಂಗಡಿ ಬೀದಿಗಳಲ್ಲಿ ನಮಸ್ಕಾರಗಳು, ಜನರಿಂದ ಬೋಧಕರನ್ನಿಸಿಕೊಳ್ಳುವದು, ಇವುಗಳೇ ಅವರಿಗೆ ಇಷ್ಟ.** ಗೌರವವನ್ನು ಅಪೇಕ್ಷಿಸುವದನ್ನು ಖಂಡಿಸಲಾಗಿದೆ. "ಅಂಗಡಿ ಬೀದಿಗಳು" ಸಾಮಾಜಿಕ ಜನಸಮೂಹದ ಸ್ಥಳವಾಗಿವೆ ಮತ್ತು ಈ ಧಾರ್ಮಿಕ ನಾಯಕರು ಅಲ್ಲಿ ತಮಗೆ ನಮಸ್ಕಾರ ಮಾಡುವ ಎಲ್ಲರಿಂದ ಸಾರ್ವಜನಿಕ ಸ್ತುತಿಯನ್ನು ಹೊಂದುವದರಲ್ಲಿ ಆನಂದಿಸುತ್ತಾರೆ. ಸಾಮಾನ್ಯವಾದ ವಂದನೆಗಿಂತ ಇಲ್ಲಿ ಹೊಂದುವ ನಮಸ್ಕಾರ ಅವರಿಗೆ ಶ್ರೇಷ್ಟವಾಗಿದೆ.

"ಬೋಧಕರು" ಎಂಬ ಪದದ ಅರ್ಥ "ನನ್ನ ಒಡೆಯ" ಅಥವಾ "ನನ್ನ ಯಜಮಾನ" ಎಂದರ್ಥ, ಇದನ್ನು ಧರ್ಮಶಾಸ್ತ್ರದ ಶ್ರೇಷ್ಟ ಗುರು ಎಂದು ಪರಿಗಣಿಸಿದವರಿಗೆ ನೀಡುವ ಗೌರವದ ಬಿರುದಾಗಿತ್ತು. ಯೇಸು ಮತ್ತು ಸ್ನಾನಿಕನಾದ ಯೋಹಾನನಿಗೆ ಈ ಬಿರುದನ್ನು ಉಪಯೋಗಿಸುತ್ತಿದ್ದರು (ಮಾರ್ಕ 9:5; 11:21; ಯೋಹಾನ 1:38, 49; 3:2, 26). Jack P. Lewis ರವರು ಈ ಪದದ ಇತಿಹಾಸವನ್ನು ಕುರಿತು ಪುನರ್‌ಪರಿಶೀಲನೆ ಮಾಡಿದ್ದಾರೆ:

> *Rabbi* ("ನನ್ನ ಗುರು") ಇದು ಬಹುಶಃ ಮೊದಲನೆ ಶತಮಾನದಲ್ಲಿ ಗೌರವಾನ್ವಿತ ಬಿರುದಾಗಿ ಉಪಯೋಗಿಸಲ್ಪಟ್ಟಿದೆ ರಬ್ಬಿಯ ಸಂಪ್ರದಾಯದಲ್ಲಿ ಗಮಾಲಿಯೇಲನು ಮೊದಲನೆ ಬೋಧಕನಾಗಿದ್ದನು ಆತನಿಗೆ ರಬ್ಬಿಯ (ರಬ್ಬಿಗಿಂತ ಹೆಚ್ಚು ಗೌರವಾನ್ವಿತ

ಬಿರುದು) ಎಂಬ ಬಿರುದು ಅನ್ವಯಿಸುತ್ತದೆ. Talmudicನ ಕಾಲಾವದಿಯಲ್ಲಿ ಒಬ್ಬ ವಿದ್ಯಾರ್ಥಿ ತಮ್ಮ ಗುರುವನ್ನು rabbi ಎಂದು ಸಂಬೋಧಿಸಬೇಕಾಗಿತ್ತು.[13]

**ವಚನ 8.** ಯೇಸು ತನ್ನ ಶಿಷ್ಯರಿಗೆ ಜೊತೆ ವಿಶ್ವಾಸಿಗಳ ಮಧ್ಯದಲ್ಲಿ ನಿಮ್ಮನ್ನು **Rabbi** ಎಂಬ ಪದನಾಮವನ್ನು ಹೊಂದಿದವರೆಂದು ತೋರಿಸಿಕೊಳ್ಳಬೇಡಿರಿ ಎಂದು ಎಚ್ಚರಿಕೆಯನ್ನು ನೀಡುತ್ತಾನೆ. ಯೆಹೂದ್ಯ ಧರ್ಮದಲ್ಲಿ, ಒಬ್ಬ ವಿದ್ಯಾರ್ಥಿ ಹಾದು ಬರುವ ಬೇರೆ ಬೇರೆ ವಿಧದ ಶಿಷ್ಯತ್ವಗಳಿದ್ದವು ಮತ್ತು ವಿದ್ಯಾರ್ಥಿಯ ಅಂತಿಮ ಗುರಿ ತಾನು ಸಹ ತನ್ನ ಕೈಕೆಳಗೆ ವಿದ್ಯಾರ್ಥಿಗಳನ್ನು ಹೊಂದಿರುವ ರಬ್ಬಿ ಆಗಬೇಕು ಎಂಬುದಾಗಿತ್ತು.[14] ಆದರೂ, ಯೇಸುವಿನ ಹಿಂಬಾಲಕರು ವೈಯಕ್ತಿಕ ಬಯಕೆಗಳಿಂದ ಸೆಳೆಯಲ್ಪಟ್ಟವರಾಗಿರಬಾರದು.

ಯೇಸು ಸಭೆಯಲ್ಲಿ ಬೋಧಕರು ಹೊಂದಿರುವ ಪಾತ್ರವನ್ನು ಅಲ್ಲಗಳೆಯುತ್ತಿಲ್ಲ (ಅಪೊಸ್ತಲರ ಕೃತ್ಯಗಳು 13:1; 1 ಕೊರಿಂಥ 12:28; ಎಫೆಸ 4:11; 1 ತಿಮೋಥೆ 2:7; 3:2; 2 ತಿಮೋಥೆ 1:11; ಇಬ್ರಿಯ 5:12). ಅದರ ಬದಲಾಗಿ, ಆತನು ತನ್ನ ಶಿಷ್ಯರಿಗೆ ದೀನತೆಯನ್ನು ಹೊಂದಿಕೊಳ್ಳಬೇಕು ಮತ್ತು ತನ್ನ ಸಾರ್ವಭೌಮ ಅಧಿಕಾರವನ್ನು ಗುರುತಿಸಬೇಕೆಂದು ಕರೆ ನೀಡುತ್ತಿದ್ದಾನೆ. ಉನ್ನತವಾದ ಅರ್ಥದಲ್ಲಿ ಯೇಸು ಮಾತ್ರ ನಿಜವಾದ **ಬೋಧಕ**ನಾಗಿದ್ದಾನೆ. ಸತ್ಯವು ಆತನಿಂದ ಮಾತ್ರ ಉದ್ಭವಿಸುತ್ತದೆ. ಇತರ ಗುರುಗಳು ಕೇವಲ ಆತನು ಏನನ್ನು ಬೋಧಿಸಿದ್ದಾನೋ ಆ ಜ್ಞಾನವನ್ನು ಹಂಚಿಕೊಳ್ಳುತ್ತಾರೆ (28:18-20; ಯೋಹಾನ 14:26; 16:12-15).

ಧಾರ್ಮಿಕ ಗುರುಗಳಿಗೆ ಇರುವ ಬಿರುದುಗಳಿಗೆ ಒಂದು ಸಾಮಾನ್ಯ ಉದ್ದೇಶವಿರುತ್ತದೆ: ಅದೇನಂದರೆ ಅದನ್ನು ಹೊಂದಿರುವವರನ್ನು ಉನ್ನತಿಗೇರಿಸುವದಾಗಿದೆ. ಯೇಸು ಕ್ರೈಸ್ತ **ಸಹೋದರರ** ಮಧ್ಯದಲ್ಲಿ ಸಾಮಾನ್ಯ ಭಾವನೆಯಿರಬೇಕೆಂಬುದಕ್ಕೆ ಒತ್ತು ನೀಡುತ್ತಾನೆ (ನೋಡಿರಿ 12:48-50; ಗಲಾತ್ಯ 3:28). ದೇವರ ರಾಜ್ಯದಲ್ಲಿ ಯಾವ ಯಜಮಾನನೂ ಇರುವದಿಲ್ಲ; ಅಲ್ಲಿಯ ಪ್ರಜೆಗಳೆಲ್ಲರೂ ಸೇವಕರೇ (20:25-28). ಸಭೆಯಲ್ಲಿ ಹೆಚ್ಚಿನವರಾಗುವದಕ್ಕೆ ಇರುವ ಮಾರ್ಗ ಸೇವೆ. ಯಾರಾದರೂ ತನ್ನನ್ನು ತಾನು ಹೆಚ್ಚಿಸಿಕೊಳ್ಳಲು ಬಯಸುತ್ತಾನೋ ಅವನು ತಗ್ಗಿಸಲ್ಪಡುತ್ತಾನೆ ಮತ್ತು ಯಾರು ತನ್ನನ್ನು ತಾನು ತಗ್ಗಿಸಿಕೊಳ್ಳುತ್ತಾನೋ ಅವನು ಹೆಚ್ಚಿಸಲ್ಪಡುತ್ತಾನೆ. ಇದು ದೇವರ ಮೌಲ್ಯಮಾಪನ ನಿಜವಾಗಿಯು ಪರಿಗಣಿಸಲ್ಪಡುತ್ತದೆ.

**ವಚನ 9.** ಯೇಸು ಧಾರ್ಮಿಕ ನಾಯಕರನ್ನು **ತಂದೆ** ಎಂದು ಕರೆಯುವದನ್ನು ಖಂಡಿಸಿದ್ದಾನೆ. ಇದು ಬಹಳ ಕಾಲದಿಂದ ರೂಢಿಯಲ್ಲಿರುವ ಸಂಪ್ರದಾಯ. ಹಿಂದೆ ನ್ಯಾಯಸ್ಥಾಪಕರ ಕಾಲದಲ್ಲಿ, ಲೇವಿಯರಾದ ಯಾಜಕರು ತಂದೆ ಎಂದು ಪರಿಗಣಿಸಲ್ಪಡುತ್ತಿದ್ದರು (ನ್ಯಾಯಸ್ಥಾಪಕರು 17:10). ಪ್ರವಾದಿಯಾದ ಎಲೀಷನು ತನ್ನ ತರಬೇತಿದಾರನಾದ ಎಲೀಯನನ್ನು, "ನನ್ನ ತಂದೆ" ಎಂದು ಕರೆದನು (2 ಅರಸುಗಳು 2:12). ಇಸ್ರಾಯೇಲರ ಅರಸುಗಳು ಎಲೀಷನನ್ನು ಅದೇ ರೀತಿಯಲ್ಲಿ ಸಂಬೋಧಿಸುತ್ತಿದ್ದರು (2 ಅರಸುಗಳು 6:21; 13:14). ರಬ್ಬಿಯರ ಅವಧಿಯಲ್ಲಿ, "ತಂದೆ" ಎಂಬ ಪದನಾಮ ಪ್ರಾಮುಖ್ಯರಾದ ಗುರುಗಳಿಗೆ ಗೌರವವನ್ನು ಸೂಚಿಸಲು ಉಪಯೋಗಿಸಲಾಗುತಿತ್ತು.[15]

ಯೇಸು ಭೂಲೋಕದ ತಂದೆಗಳಿಗೆ ಕಾಯ್ದಿರಿಸಲಾದ ಬಿರುದನ್ನು ಖಂಡಿಸುತ್ತಿಲ್ಲ (15:4; 19:19; ಎಫೆಸ 6:2; ಕೊಲಸ್ಸೆ 3:21; ಇಬ್ರಿಯ 12:9). ಪೌಲನು ತಾನು ಸುವಾರ್ತೆಯ ಮುಲಕ ಹೊಂದಿಕೊಂಡಿರುವ ಕೆಲವರಿಗೆ ತಂದೆಯೆಂದು ಹೇಳುತ್ತಾನೆ (1 ಕೊರಿಂಥ 4:15; 1 ತಿಮೊಥೆ 1:2; 2 ತಿಮೋಥೆ 1:2; ತೀತನು 1:4). ಪೇತ್ರನು ತನ್ನ ರೆಕ್ಕೆಯ ಕೆಳಗೆ ತೆಗೆದುಕೊಂಡ ಮಾರ್ಕನೊಂದಿಗಿರುವ ತನ್ನ ಸಂಬಂಧವನ್ನು ಇದೇ ರೀತಿಯಾಗಿ ನೋಡುತ್ತಿದ್ದನು (1 ಪೇತ್ರ 5:13). ಯೋಹಾನನು ಇಂಥಹ ಸಹೋದರರರನ್ನು "ನನ್ನ ಪ್ರಿಯರಾದ ಮಕ್ಕಳೇ" ಮತ್ತು "ಪ್ರಿಯ ಮಕ್ಕಳೇ" ಎಂದು ಸೂಚಿಸಿದ್ದಾನೆ (1 ಯೋಹಾನ 2:1, 12, 18, 28; 3:7, 18; 4:4;

5:21). ಯಾವುದೇ ಸಮಯದಲ್ಲಿ ಪ್ರೋತ್ಸಾದಾಯಕರಾದ ಈ ಜನರು ತಮ್ಮನ್ನು ಒಂದು ಬಿರುದಿನಿಂದ ಸಂಬೋಧಿಸಬೇಕೆಂದು ಹೇಳಲಿಲ್ಲ. ಒಬ್ಬನೇ ಒಬ್ಬ ಆತ್ಮೀಕ **ತಂದೆ**ಯಿದ್ದಾನೆ ಅದು "ಪರಲೋಕದಲ್ಲಿರುವ ನಮ್ಮ ತಂದೆ" (6:9; ನೋಡಿರಿ 5:48; 6:14, 26, 32; 15:13; 18:35).

**ವಚನ 10.** ವಚನ 8ರಲ್ಲಿರುವ ಭಾವನೆಗಳನ್ನು ವಚನ 10ರಲ್ಲಿ ಪುನರಾವರ್ತಿಸಲಾಗಿದೆ. **ನಾಯಕ** ಎಂಬ ಪದಕ್ಕೆ ಗ್ರೀಕ್ ಪದ (*kathēgētēs*) ಇದೊಂದೇ ಮಾತ್ರ ಹೊಸ ಒಡಂಬಡಿಕೆಯಲ್ಲಿ ಉಪಯೋಗಿಸಲಾಗಿದೆ. ಈ ಪದವನ್ನು ಅನೇಕ ವಿಧದಲ್ಲಿ "ಯಜಮಾನ" (KJV), "ಬೋಧಕ" (NKJV), ಮತ್ತು "ಮಾರ್ಗದರ್ಶಕ" (NRSV) ಎಂದು ಅನುವಾದಿಸಲಾಗಿದೆ. ಇದು "ಬೋಧಕ" ಎಂಬ ಪದಕ್ಕೆ ನಿಕಟವಾದ ಸಮಾನಾರ್ಥಕ ಪದವಾಗಿದೆ. "ನಾಯಕ" (*didaskalos*) ಈ ಬಿರುದನ್ನು **ಕ್ರಿಸ್ತನಿಗೆ** ಕಾಯ್ದಿರಿಸಲಾಗಿದೆ. ಆತನೊಬ್ಬನೇ ಆತ್ಮೀಕ ನಾಯಕನು, ಆತನ ಬೋಧನೆಗಳನ್ನು ಅನುಸರಿಸಬಹುದು. ಇತರರು ಆತನ ವಾಕ್ಯಗಳ ಬೋಧಕರಾಗಿರಬಹುದು.

ವಚನ 8 ರಿಂದ 10ರವರೆಗೆ, ಯೇಸು ಕೆಲವು ಜನರನ್ನು ಉನ್ನತಿಗೇರಿಸುವ ಮನುಷ್ಯನ ಪ್ರವೃತ್ತಿಯನ್ನು ವಿರೋಧಿಸುತ್ತಾನೆ. ಆತನು ತನ್ನ ಸಭೆಯಲ್ಲಿ ಯಾವುದೇ ಕ್ರಮಾಗತ ವ್ಯವಸ್ಥೆಯನ್ನು ಬೆಳವಣಿಗೆಯನ್ನು ವಿರೋಧಿಸುತ್ತಾನೆ. ಸಭೆಯಲ್ಲಿರಬೇಕಾದ ಒಂದೇ ಕ್ರಮಾಗತ ವ್ಯವಸ್ಥೆಯೆಂದರೆ ಯೇಸು ಸಭೆಗೆ ತಲೆಯಾಗಿದ್ದಾನೆ ಮತ್ತು ದೇವರು ತಂದೆಯಾಗಿದ್ದಾನೆ.[16]

**ವಚನಗಳು 11, 12.** ಯೇಸು ಈ ಮಾತುಗಳನ್ನು ಹೇಳುವದರ ಮೂಲಕ ಈ ಭಾಗವನ್ನು ಮುಕ್ತಾಯಗೊಳಿಸುತ್ತಾನೆ. **ನಿಮ್ಮಲ್ಲಿ ಹೆಚ್ಚಿನವನು ನಿಮ್ಮ ಸೇವಕನಾಗಿರಬೇಕು. ತನ್ನನ್ನು ಹೆಚ್ಚಿಸಿಕೊಳ್ಳುವವನು ತಗ್ಗಿಸಲ್ಪಡುವನು, ತನ್ನನ್ನು ತಗ್ಗಿಸಿಕೊಳ್ಳುವವನು ಹೆಚ್ಚಿಸಲ್ಪಡುವನು.** ಈ ಮಾತುಗಳು ಸ್ವಾರ್ಥ ಸೇವಕರಾದ ಫರಿಸಾಯರನ್ನು ಅನುಕರಿಸಬಾರದು ಎಂದು ಜನರನ್ನು ಎಚ್ಚರಿಸುತ್ತದೆ, ಅವರು ಜನರಿಂದ ಹೊಗಳಿಕೆಯನ್ನು ಹೊಂದಲು ಅನೇಕಾವರ್ತಿ ತಮ್ಮನ್ನು ತಾವು ಉನ್ನತಿಗೇರಿಸುತ್ತಾರೆ. ವಚನ 11ರಲ್ಲಿರುವ ಭಾಷೆ ಹಿಂದೆ 20:26ರಲ್ಲಿ ಹೇಳಿರುವ ಹೇಳಿಕೆಯನ್ನು ಹೋಲುತ್ತದೆ: "ನಿಮ್ಮಲ್ಲಿ ಯಾರು ದೊಡ್ಡವನಾಗಿರಬೇಕೆಂದಿರುತ್ತಾನೋ ಅವನು ನಿಮ್ಮ ಸೇವಕನಾಗಬೇಕು." ವಚನ 12ರ ವಿಷಯ ಅನೇಕಾವರ್ತಿ ವಾಕ್ಯಭಾಗಗಳಲ್ಲಿ ಕಂಡುಬರುತ್ತದೆ (ಜ್ಞಾನೋಕ್ತಿ 29:23; ಲೂಕ 14:11; 18:14; ಫಿಲಿಪ್ಪಿ 2:6-9; ಯಾಕೋಬ 4:6; 1 ಪೇತ್ರ 5:5, 6). ನಂತರ Talmud ನಲ್ಲಿ ಬರೆದ ಬರಹಗಳು ಈ ಮುಖ್ಯ ವಿಷಯವನ್ನು ಪುನರಾವರ್ತಿಸುತ್ತವೆ: "ಯಾರು ತನ್ನನ್ನು ತಾನು ಪರಿಶುದ್ಧನಾದ ದೇವರ ಮುಂದೆ ತಗ್ಗಿಸಿಕೊಳ್ಳುತ್ತಾನೋ ಆತನು ಧನ್ಯನು, ಉನ್ನತಿಗೇರುವವನು ಮತ್ತು ಯಾರು ತನ್ನನ್ನು ತಾನು ಪರಿಶುದ್ಧನಾದ ದೇವರ ಮುಂದೆ ಉನ್ನತಿಗೇರಿಸಿಕೊಳ್ಳುವನೋ ಅವನು ತಗ್ಗಿಸಲ್ಪಡುವನು."[17]

## ಪಾಠಗಳು

## ನಿಜವಾದ ಧರ್ಮ (ಅಧ್ಯಾಯ 23)

ಮತ್ತಾಯ 23ನೇ ಅಧ್ಯಾಯವನ್ನು ಅನೇಕಾವರ್ತಿ "ಸಂಕಟಗಳು" ಅಧ್ಯಾಯವೆಂದು ಕರೆಯಲಾಗಿದೆ ಯಾಕೆಂದರೆ ಯೇಸು ಆ ಪದವನ್ನು ಉಪಯೋಗಿಸುತ್ತಾನೆ (23:13, 14, 15, 16, 23, 25, 27, 29). *Ouai,* ಎಂಬ ಪದ "ಸಂಕಟ" ಎಂದು ಅನುವಾದಿಸಲಾಗಿದೆ. ಇದು ಯೆಹೂದ್ಯ ನಾಯಕರ ಆತ್ಮೀಕ ಸ್ಥಿತಿಯನ್ನು ನೋಡಿದ ಕರ್ತನ ಸಂಕಟವನ್ನು, ಅಲ್ಲದೇ ಅವರ ಮೇಲೆ ಬರಲಿಕ್ಕಿರುವ ನ್ಯಾಯತೀರ್ಪಿನ ವಾಗ್ದಾನವನ್ನು ಸೂಚಿಸುತ್ತದೆ. ಶಾಸ್ತ್ರಿಗಳು ಮತ್ತು ಫರಿಸಾಯರು ಧಾರ್ಮಿಕ ಮನೋಭಾವನೆಯುಳ್ಳವರು ಮತ್ತು ಶ್ರದ್ಧೆಯುಳ್ಳವರು

ಆಗಿದ್ದರು, ಆದರೆ ಅವರು ದೇವರು ಸ್ವೀಕರಿಸಬಹುದಾದ ಗುಣಗಳ ಕೊರತೆಯಲ್ಲಿದ್ದರು. ಈ ಅಧ್ಯಾಯದಿಂದ ನಿಜವಾದ ಧರ್ಮದ ಐದು ಪಾಠಗಳನ್ನು ನಾವು ಕಲಿಯಬಹುದು.

1. *ಒಂದು ಕಾರ್ಯ ನೀತಿವಂತಿಕೆಯಿಂದ ಕೂಡಿರದಿದ್ದರೂ ಧಾರ್ಮಿಕವಾಗಿರಬಹುದು* (23:1-12). ಫರಿಸಾಯರು ಅನೇಕ ಧಾರ್ಮಿಕ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು ಆದರೆ ಇವು ಕೇವಲ ಜನರು ನೋಡಲೆಂದು ಮಾತ್ರ ಮಾಡುತ್ತಿದ್ದರು. ಅವರು ತಮ್ಮ ಹಣೆಪಟ್ಟಿಗಳನ್ನು ಅಗಲಮಾಡುತ್ತಿದ್ದರು ಮತ್ತು ಗೋಡೆಗಳನ್ನು ಉದ್ದಮಾಡುತ್ತಿದ್ದರು. ಅವರು ಬೋಧಿಸುವ ಅಧಿಕಾರಯುತವಾದ ಸ್ಥಾನವನ್ನು ಇಷ್ಟಪಡುತ್ತಿದ್ದರು ಮತ್ತು ಅದರಿಂದ ದೊರೆಯಬಹುದಾದ ಎಲ್ಲಾ ಹೊಗಳಿಕೆಯನ್ನು ಇಷ್ಟಪಡುತ್ತಿದ್ದರು, ಗೌರವದ ಸ್ಥಾನ ಮತ್ತು ಗೌರವದ ಬಿರುದುಗಳನ್ನು ಒಳಗೊಂಡು. ಅದರ ಹಿಂದಿರುವ ಅವರ ಉದ್ದೇಶ ಅದನ್ನು ನಿರರ್ಥಕ ಮಾಡುತ್ತಿದ್ದವು.

2. *ಒಂದು ಕಾರ್ಯ ಪ್ರಯೋಜನೀಯವಾಗಿಲ್ಲವಾದರೂ ಧಾರ್ಮಿಕವಾಗಿರಬಹುದು* (23:13, 15). ನಿಜವಾಗಿಯೂ ಇಂಥಹ ಕಾರ್ಯಗಳು ಅಪಾಯಕಾರಿ ಕೂಡಾ ಆಗಿರುತ್ತವೆ. ಫರಿಸಾಯರು ಮತಾಂತರ ಮಾಡುವದರಲ್ಲಿ ಬಹಳ ಪ್ರಯತ್ನವನ್ನು ಮಾಡುತ್ತಿದ್ದರು. ಆದಾಗ್ಯೂ ಕೊನೆಯ ಪರಿಣಾಮ ತನ್ನನ್ನು ಮತಾಂತರ ಮಾಡಿದವರಿಗಿಂತ ಇವರು ಹೆಚ್ಚು ಭ್ರಷ್ಟರಾಗುತ್ತಿದ್ದರು.

3. *ಒಂದು ಕಾರ್ಯ ಸಮಂಜವಾಗಿಲ್ಲವಾದರು ಧಾರ್ಮಿಕವಾಗಿರಬಹುದು* (23:23). ಸಣ್ಣ ವಿಷಯಗಳಲ್ಲಿ ಪ್ರಾಮಾಣಿಕರಾಗಿಲ್ಲವೆಂದು ಯೇಸು ಫರಿಸಾಯರನ್ನು ಖಂಡಿಸುತ್ತಿಲ್ಲ. ಯೆಹೂದ್ಯರಲ್ಲಿ ತೋಟದಲ್ಲಿ ಬೆಳೆಯುವ ಮರುಗ ಸೋಪು ಜೀರಿಗೆಗಳಲ್ಲಿ ದಶಮಾಂಶವನ್ನು ಕೊಡುವದು ಒಳ್ಳೇಯ ಕಾರ್ಯವಾಗಿತ್ತು. ಬದಲಾಗಿ ಆತನು ಅವರನ್ನು ಸಣ್ಣ ಸಣ್ಣ ವಿಷಯದಲ್ಲಿ ಅಳೆಯುವದನ್ನು ಖಂಡಿಸಿದನು. ಅತಿ ಚಿಕ್ಕ ವಿಷಯಕ್ಕೆ ಒತ್ತು ನೀಡುವಾಗ, ಅವರು ಅತೀ ಪ್ರಾಮುಖ್ಯವಾದ ಸಂಗತಿಯನ್ನು ಅಲಕ್ಷಿಸುತ್ತಿದ್ದರು: ನ್ಯಾಯ, ಕರುಣೆ, ಮತ್ತು ಪ್ರಾಮಾಣಿಕತೆ.

4. *ಒಂದು ಕಾರ್ಯವನ್ನು ಕಾರ್ಯ ರೂಪದಲ್ಲಿ ತರದಿದ್ದಲ್ಲಿ ಅದು ಉಪಯೋಗ ವಿಲ್ಲದ್ದಾಗಿದ್ದರೂ ಅದು ಧಾರ್ಮಿಕವಾಗಿ ದಾರ್ಶನಿಕವಾಗಿರಬಹುದು ಮತ್ತು ಮಾದರಿಯಾಗಿರಬಹುದು* (23:29-36). ಫರಿಸಾಯರು ತಮ್ಮ ಪೂರ್ವಜರು ಕೊಂದ ಪ್ರವಾದಿಗಳ, ಸಮಾಧಿಗಳನ್ನು ಗೌರವಿಸುತ್ತಿದ್ದರು; ಆದರೆ ಅವರು ತಮ್ಮ ಹೃದಯವನ್ನು ಪರಿವರ್ತಿಸಿಕೊಂಡಿರಲಿಲ್ಲ. ಅವರು ಸಹ ತಮ್ಮ ಸಮಯದಲ್ಲಿ ದೇವರು ಕಳುಹಿಸಿದವರನ್ನು ಅಸಭ್ಯವಾಗಿ ನಡೆಸಿಕೊಂಡಿದ್ದರು ಮತ್ತು ಕೊಂದಿದ್ದರು - ಯೇಸು ಮತ್ತು ಆತನ ಶಿಷ್ಯರು.

5. *ತಪ್ಪಾಗಿರುವ ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡವರು ಶಾಶ್ವತವಾಗಿ ತಪ್ಪಾಗಿಯೇ ಇರಬೇಕೆಂದೇನಿಲ್ಲ* (23:37-39). ಅವರು ಪಶ್ಚಾತ್ತಾಪ ಪಟ್ಟು ದೇವರೊಂದಿಗೆ ಸರಿಯಾದ ಸಂಬಂಧವನ್ನು ಹೊಂದಬಹುದಿತ್ತು. ದೇವರನ್ನು ಶಾಶ್ವತವಾಗಿ ತಿರಸ್ಕರಿಸುವದು ಭಯಂಕರವಾದ ತಪ್ಪಾಗಿದೆ, ಆದರೆ ಯಾರು ರಕ್ಷಿಸದೇ ಇರುವ ಸ್ಥಿತಿಯಲ್ಲಿ ಇರಬಾರದು.[18]

## ಫರಿಸಾಯರು (ಅಧ್ಯಾಯ 23)

ಫರಿಸಾಯರ ಮೂಲ ಉದ್ದೇಶ ಅನ್ಯ ಸಂಸ್ಕೃತಿಯ ಅಕ್ರಮಣದ ಮಧ್ಯದಲ್ಲಿ ಧರ್ಮಶಾಸ್ತ್ರಕ್ಕೆ ವಿಧೇಯರಾಗುವದನ್ನು ಕಾಪಾಡಿಕೊಳ್ಳುವದಾಗಿತ್ತು. "ಫರಿಸಾಯರು" ಎಂಬ ಹೆಸರಿನ ಅರ್ಥ "ಪ್ರತ್ಯೇಕಿಸಲ್ಪಟ್ಟವರು" ಇದು ಪಾಪದಿಂದ ಪ್ರತ್ಯೇಕಿಸಲ್ಪಟ್ಟವರು ಎಂದು ಸೂಚಿಸುತ್ತದೆ. ಯಾರು ಹೊಸ ಒಡಂಬಡಿಕೆಯ ಕ್ರೈಸ್ತತ್ವದ ಕಲ್ಪನೆಯನ್ನು ಪುನಃ ಸ್ಥಾಪಿಸುವದರಲ್ಲಿ ಮತ್ತು ಸಂರಕ್ಷಿಸುವದರಲ್ಲಿ ಆಸಕ್ತಿಯನ್ನು ಹೊಂದಿರುತ್ತಾರೋ ಅವರು ನಿಶ್ಚಯವಾಗಿಯೂ ಇದನ್ನು ಉತ್ತಮವಾದ ಕಾರ್ಯ ಎಂದು ಹೊಗಳುತ್ತಾರೆ. ಆದಾಗ್ಯೂ, ಯೇಸು ಅವರನ್ನು ಹಲವು ಕಾರಣಗಳಿಗಾಗಿ ಗದರಿಸುತ್ತಾನೆ. ನಾವು ಸಹ ಇಂಥಹದೆ ತಪ್ಪುಗಳನ್ನು ಮಾಡದಂತೆ ಎಚ್ಚರ ವಾಗಿರಬೇಕು.

1. ಫರಿಸಾಯರು ತಾವು ಏನನ್ನು ಉಪದೇಶಿಸುತ್ತಾರೋ ಅದನ್ನು ಕೈಕೊಂಡು ನಡೆಯುವದಿಲ್ಲ (23:2, 3).
2. ಅವರು ತಮ್ಮ ಸಂಪ್ರದಾಯಗಳನ್ನು ಅವು ದೇವರ ಆಜ್ಞೆಗಳಾಗಿದ್ದಾವೇನೋ ಎಂಬಂತೆ ಅವುಗಳನ್ನು ಇತರರ ಮೇಲೆ ಹೇರುತ್ತಾರೆ (23:4; ನೋಡಿರಿ 15:1-9).
3. ಅವರು ದೇವರಲ್ಲಿರುವ ತಮ್ಮ ಮಾನ್ಯತೆಗಿಂತ ಮನುಷ್ಯರಲ್ಲಿ ಮಾನ್ಯತೆಗೆ ಹೆಚ್ಚು ಕಳಕಳಿಯುಳ್ಳವರಾಗಿರುತ್ತಾರೆ (23:5-7).
4. ಅವರು ಜನರನ್ನು ದೇವರೆಡೆಗೆ ಪರಿವರ್ತಿಸುವದರ ಬದಲಾಗಿ ತಮ್ಮ ಗುಂಪಿಗೆ ಮತಾಂತರಿಸುತ್ತಾರೆ (23:13, 15).
5. ಅವರಿಗೆ ಅನುಕೂಲವಾದಾಗ ಮಾತ್ರ ಅವರು ತಮ್ಮ ಮಾತುಗಳಿಗೆ ಬದ್ಧರಾಗಿರುತ್ತಾರೆ (23:16-22).
6. ಅವರಿಗೆ ಆರಾಧನೆಯ ಶಾಸ್ತ್ರ ವಿಧಿಗಳಲ್ಲಿ ಪರಿಣಿತರಾಗಿರುತ್ತಾರೆ ಆದರೆ "ಪರಿಶುದ್ಧ ಮತ್ತು ಕಳಂಕ ರಹಿತ ಧರ್ಮದಲ್ಲಿ" ಅನುಭವವಿಲ್ಲದವರಾಗಿದ್ದಾರೆ (23:23, 24; ನೋಡಿರಿ 25:34-46; ಯಾಕೋಬ 1:27).
7. ಅವರು ಹೊರಗಿನ ತೋರಿಕೆಗೆ ನೀತಿವಂತರಾಗಿ ಕಾಣುತ್ತಾರೆ ಅಂದರೆ ಅಂತರ್ಯದಲ್ಲಿ ಹೊಸದಾಗಿರುವ ಅನುಭವವನ್ನು ಹೊಂದಿರುವದಿಲ್ಲ (23:25-28).
8. ಅವರು ತಮ್ಮ ತಂದೆಗಳು ಮಾಡಿದ ತಪ್ಪನ್ನು ಕುರುಡರಂತೆ ಪುನರಾವರ್ತಿಸುತ್ತಿದ್ದಾರೆ (23:29-36). David Stewart

## ನವಯುಗದ - ಫರಿಸಾಯತ್ವ (23:1-12)

ಕ್ರೈಸ್ತರು ಫರಿಸಾಯರ ಮನೋಧರ್ಮವನ್ನು ಅಳವಡಿಸಿಕೊಳ್ಳುವದರ ಕುರಿತಾಗಿ ಎಚ್ಚರವಾಗಿರಬೇಕು. ಧರ್ಮವನ್ನು ಆಂತರಿಕವಾಗಿ ತಿಳಿದುಕೊಳ್ಳುವದಕ್ಕೆ ಬದಲಾಗಿ ಬಹಿರಂಗವಾಗಿ ತಿಳಿದುಕೊಳ್ಳುವದು ಸರಳ. ಒಬ್ಬನು "ಭಾನುವಾರದ ಉತ್ತಮವಾದವುಗಳನ್ನು" ಧರಿಸಬಹುದ ಆದರೆ ಆರಾಧನೆಗೆ ತನ್ನ ಹೃದಯವನ್ನು ಸಿದ್ಧಪಡಿಸಿಕೊಳ್ಳಲಿಕ್ಕಿಲ್ಲ. ಅವನು ಸಭೆಯಲ್ಲಿ ಸುಂದರವಾಗಿ ಬಟ್ಟೆ ಧರಿಸದೇ ಇರುವ ಇತರರನ್ನು ಕೀಳಾಗಿ ನೋಡಬಹುದು (ಯಾಕೋಬ 2:2-4). ಪ್ರಾರ್ಥನೆಯನ್ನು ನಡೆಸುವಾಗ ಆತನು ದೀನತೆಯಿಂದ ದೇವರೊಟ್ಟಿಗೆ ಮಾತನಾಡುವದಕ್ಕೆ ಬದಲಾಗಿ ಸಭಿಕರ ಮೇಲೆ ಪ್ರಭಾವವನ್ನು ಬೀರಲು ಪ್ರಯತ್ನಿಸುತ್ತಿರಬಹುದು. ಆತನು ಇತರರನ್ನು ಮೆಚ್ಚಿಸುವದಕ್ಕಾಗಿ ಉದ್ದವಾದ ಪ್ರಾರ್ಥನೆಗಳನ್ನು ಮಾಡಬಹುದು. ಆತನು ಸಭೆಯ ಆರಾಧನೆಯ ಸಮಯದಲ್ಲಿ ನೀತಿವಂತಿಕೆಗೆ ಆದ್ಯತೆಯನ್ನು ನೀಡಬಹುದು ವಾರವಿಡಿ ತನ್ನ ನೀತಿವಂತಿಕೆಗೆ ವಿಶ್ರಾಂತಿಯನ್ನು ನೀಡಿರಬಹುದು. ಫರಿಸಾಯರ ಮನೋಸ್ಥಿತಿಯೊಂದಿಗೆ ಒಂದಾಗುವದು ತನ್ನ ಪ್ರಾಮುಖ್ಯತೆಯನ್ನೇ ಹೊಗಳಿಕೊಳ್ಳುತ್ತದೆ. ಯಾವಾಗಲಾದರೂ ಆತನು ಕೋಣೆಯನ್ನು ಪ್ರವೇಶಿಸುವಾಗ ಇತರರ ಬೇಡಿಕೆಗಳಿಗೆ ಸೇವೆಯನ್ನು ಮಾಡುವದಕ್ಕೆ ಬದಲಾಗಿ ಎಲ್ಲರ ಗಮನವನ್ನು ತನ್ನೆಡೆಗೆ ಸೆಳೆದುಕೊಳ್ಳುವದು ಆತನ ಗುರಿಯಾಗಿರುತ್ತದೆ. ಸಾರಾಂಶವಾಗಿ ಆತನು ಹೇಳುತ್ತಾನೆ, "ನೀವು ಅಲ್ಲಿದ್ದೀರಿ" ಎಂಬುದಕ್ಕೆ ಬದಲಾಗಿ "ನಾನು ಇಲ್ಲಿದ್ದೇನೆ" ಎಂದು ಹೇಳಿದ್ದಾನೆ. David Stewart

## ಘನತೆಗೇರಿಸುವ ಪದವಿಗಳು (23:8-10)

ಘನತೆಗೇರಿಸುವ ಬಿರುದುಗಳ ಕುರಿತು ಯೇಸುವಿನ ಉಪದೇಶವನ್ನು ಅನೇಕ ಧಾರ್ಮಿಕ ಗುಂಪುಗಳು ನಿರ್ಲಕ್ಷಿಸಿದ್ದವು. ಕ್ಯಾಥೋಲಿಕ್ ಸಂಪ್ರದಾಯದಲ್ಲಿ, ಸಭೆಯ ಸದಸ್ಯರು

ಸಾಮಾನ್ಯವಾಗಿ ತಮ್ಮ ನಾಯಕರನ್ನು "ತಂದೆ" ಎಂದು ಸಂಭೋಧಿಸುತ್ತಾರೆ ಮತ್ತು ಅವರಿಗೆ ಕ್ಷಮಾಪಣೆಯ ಮಧ್ಯಸ್ತಿಕೆಯನ್ನು ವಹಿಸುವ ಅಧಿಕಾರವನ್ನು ಸಲ್ಲಿಸುತ್ತಾರೆ. ಕೆಲವೊಮ್ಮೆ ಸಭಿಕನು ಅರಿಕೆ ಮಾಡುವದಕ್ಕೆ ಸಭಾಪಾಲಕರ ಬಳಿಕೆ ಹೋಗಿ ಕೆಲವೊಮ್ಮೆ ಈ ರೀತಿಯಾಗಿ ಹೇಳುತ್ತಾನೆ. "ತಂದೆಯೇ ನನ್ನನ್ನು ಕ್ಷಮಿಸು, ನಾನು ಪಾಪ ಮಾಡಿದ್ದೇನೆ." ಈ ವಿಷಯದಲ್ಲಿ "ತಂದೆ" ಎಂಬ ಶಿರೋನಾಮೆ ಮತ್ತು ಸಹೋದರತ್ವದ ಕಲ್ಪನೆಯನ್ನು ವಿರೋಧಿಸುತ್ತದೆ (23:8). ಬದಲಾಗಿ, ಕ್ರೈಸ್ತರು ತಮ್ಮ ಪಾಪಗಳನ್ನು ಒಬ್ಬರಿಗೊಬ್ಬರು ಅರಿಕೆ ಮಾಡಬೇಕೆಂದು ಮತ್ತು ಒಬ್ಬರಿಗೋಸ್ಕರ ಒಬ್ಬರು ಪ್ರಾರ್ಥಿಸಬೇಕೆಂದು ಆಜ್ಞಾಪಿಸಲಾಗಿದೆ (ಯಾಕೋಬ 5:16). ತಂದೆಯಾದ ದೇವರು ಕ್ಷಮಿಸುವವನಾಗಿದ್ದಾನೆ.

Protestant ಸಂಪ್ರದಾಯದಲ್ಲಿ, "ಪೂಜ್ಯ" "reverend" ಎಂಬ ಪದವನ್ನು ಅನೇಕಾವರ್ತಿ ಸಭಾಸೇವಕರಿಗೆ ಅನ್ವಯಿಸುತ್ತದೆ. ಸತ್ಯವೇದದಲ್ಲಿ "ಪೂಜ್ಯ" ಎಂಬ ಪದವು KJV ಒಂದೇ ಒಂದು ಸಾರಿ ಕೀರ್ತನೆ 111:9ರಲ್ಲಿ ಕಂಡುಬರುತ್ತದೆ. ಈ ವಚನವು, "ದೇವರ ನಾಮವು ಪರಿಶುದ್ಧವೂ ಭಯಂಕರವೂ ಆಗಿದೆ" ಎಂದು ಹೇಳುತ್ತದೆ. ಇದು ದೇವರ ಹೆಸರು "reverend" "ಪೂಜ್ಯ" ಎಂದು ಹೇಳುವದಿಲ್ಲ, ಆದರೆ ಧರ್ಮಶಾಸ್ತ್ರವು ಆಜ್ಞಾಪಿಸುವಂತೆ ಆತನ ಹೆಸರನ್ನು ಪೂಜ್ಯವೆಂದೆಣಿಸಬೇಕು ಎಂದು ಹೇಳುತ್ತದೆ (ವಿಮೋಚನಕಾಂಡ 20:7). ಯಾರೊಬ್ಬ ವ್ಯಕ್ತಿಯು ಆ ಗೌರವಕ್ಕೆ ಯೋಗ್ಯನಲ್ಲ.

## ಬಿರುದುಗಳು (23:8-10)

ಬಿರುದುಗಳನ್ನು ಯೇಸು ಬಹಿಷ್ಕರಿಸುವದಕ್ಕೆ ಮೂರು ನಿರ್ದಿಷ್ಟವಾದ ವಿಷಯಗಳೊಂದಿಗೆ ನಿರ್ವಹಿಸಿರುವದು ಕಾರಣವಾಗಿದೆ ಎಂದು Wilkins ರವರು ಸೂಚಿಸುತ್ತಾರೆ:

1. *ಶೈಕ್ಷಣಿಕ ಅಹಂಕಾರ.* ನಾವು ಇತರರಿಗೆ ಸುವಾರ್ತೆಯನ್ನು ಬೋಧಿಸಲು ಪ್ರಯತ್ನಿಸಬೇಕು ಆದರೆ ನಾವು ಎಂದಿಗೂ ಬೋಧಕನಾದ ಯೇಸುವನ್ನು ಮರೆಯುವ ಪ್ರಯತ್ನವನ್ನು ಮಾಡಬಾರದು (23:8).

2. *ಉತ್ತಮವಾದ ಧಾರ್ಮಿಕತೆ.* ನಾವು ಯೌವನಸ್ಥ ಕ್ರೈಸ್ತರನ್ನು ಸಂರಕ್ಷಿಸಬೇಕು ಮತ್ತು ಪೋಷಿಸಬೇಕು ಆದರೆ ನಾವು ಎಂದಿಗೂ ದೇವರು ನಮ್ಮ ಪರಲೋಕದಲ್ಲಿರುವ ತಂದೆ ಎಂಬುದನ್ನು ಮರೆಯಬಾರದು (23:9).

3. *ಅಧಿಕಾರದ ಪ್ರಭುತ್ವ.* ನಾವು ಇತರರನ್ನು ಹೆಚ್ಚು ಪ್ರಭುದ್ಧ ಶಿಷ್ಯರನ್ನಾಗಿ ನಡೆಸಲು ಬಯಸಬೇಕು, ಆದರೆ ನಾವು ಯೇಸು ಮಾತ್ರ ತನ್ನ ಸಭೆಗೆ ತಲೆಯಾಗಿದ್ದಾನೆ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು (23:10).[19] David Stewart

---

ಟಿಪ್ಪಣಿಗಳು

[1]R. T. France, *The Gospel According to Matthew,* The Tyndale New Testament Commentaries (Grand Rapids, Mich.: Wm. B. Eerdmans Publishing Co., 1985), 323. ನಿಜಾಂಶವೇನೆಂದರೆ ಹಿಂದಿನ ಸನ್ನಿವೇಶದಲ್ಲಿ ಶಿಷ್ಯರು ಫರಿಸಾಯರನ್ನು ಸ್ಪಷ್ಟವಾಗಿ ಅವರನ್ನು ಹೊಗಳಿದರು ಆದರೆ ಯೇಸು ಅವರನ್ನು ಆರೋಪಿಸಿ ಮಾತನಾಡಿದನು (15:12). [2]1 Maccabees 1:20-64. [3]Ibid., 4:36-58. [4]Jerusalem Talmud *Sotah* 5.5; ನೋಡಿರಿ *Berakoth* 9.5; Talmud *Sotah* 22b. [5]Michael J. Wilkins, *"Matthew"* in *Zondervan Illustrated Bible Backgrounds Commentary*, vol. 1, *Matthew, Mark, Luke* ed. Clinton E. Arnold (Grand Rapids, Mich.: Zondervan, 2002), 140. Wilkins ರವರು Chorazin ಮತ್ತು Delos ನಿಂದ ಕುರ್ಚಿಯ ಚಿತ್ರಗಳನ್ನು ಒದಗಿಸಿಕೊಟ್ಟರು. [6]ಕೆಲವು ಮಾನವ ಕೈ ಬರಹಗಳ ಗ್ರಂಥಗಳಲ್ಲಿ "ಮತ್ತು ಹೊರಲು ಕಷ್ಟ" ಈ ಹೆಚ್ಚಿನ ಭಾಗ (ನೋಡಿರಿ KJV) ಸೇರಿಸಲಾಗಿದೆ. ಈ ಭಾಗವನ್ನು ಕಣ್ಣುತಪ್ಪಿನಿಂದ ಆಕಸ್ಮಿಕವಾಗಿ ಶಾಸ್ತ್ರಿಗಳಿಂದ

ಬಿಡಲ್ಪಟ್ಟಿರಬಹುದು ಆಗಿರಬಹುದು, ಅಥವಾ ಇದನ್ನು ಲೂಕ 11:46ರ ವಚನದಿಂದ ಒಳಗಡೆ ಸೇರಿಸಿರಬಹುದು. (Bruce M. Metzger, *A Textual Commentary on the Greek New Testament,* 2d ed. [Stuttgart: German Bible Society, 1994], 49.) [7]Leon Morris, *The Gospel According to Matthew,* Pillar Commentary (Grand Rapids, Mich.: Wm. B. Eerdmans Publishing Co., 1992), 573. [8]ವಿಮೋಚನಕಾಂಡ 16:29; 23:12; 31:13-17; 35:2, 3; ಯಾಜಕಕಾಂಡ 26:34, 35; ಅರಣ್ಯಕಾಂಡ 15:32-36; ಧರ್ಮೋಪದೇಶಕಾಂಡ 5:12-15. [9]Wilkins, 141. [10]ನೋಡಿರಿ Josephus *Antiquities* 4.8.13; *Letter of Aristeas* 159.

[11]ಈ ರೀತಿಯ ಅಭ್ಯಾಸದ ಅನೇಕ ಉದಾಹರಣೆಗಳನ್ನು Mediterranean ಪ್ರಪಂಚದಿಂದ ತೆಗೆದುಕೊಳ್ಳಲಾಗಿದೆ Craig S. Keener, *A Commentary on the Gospel of Matthew* (Grand Rapids, Mich.: Wm. B. Eerdmans Publishing Co., 1999), 542–43. [12]William Sanford LaSor and Tamara C. Eskenazi, “Synagogue,” in *The International Standard Bible Encyclopedia,* rev. ed., ed. Geoffrey W. Bromiley (Grand Rapids, Mich.: Wm. B. Eerdmans Publishing Co., 1988), 4:680. [13]Jack P. Lewis, *The Gospel According to Matthew,* Part 2, The Living Word Commentary (Austin, Tex.: Sweet Publishing Co., 1976), 110; ನೋಡಿರಿ Talmud *Berakoth* 3a; *Baba Kamma* 73b. [14]Wilkins, 142. [15]ನೋಡಿರಿ Mishnah *Peah* 8.5; Talmud *Berakoth* 6a; Jerusalem Talmud *Besah* 1.7; *Genesis Rabbah* 12.14. “ತಂದೆ” ಎನ್ನುವ ಪದಕ್ಕೆ ಅರೆಮಿಕ *abba,* ಎಂದಾಗಿದೆ (ರೋಮಾಪುರ 8:15). Mishnahದಲ್ಲಿ ಒಂದು ಲೇಖನ ಅದರ ಹೆಸರು *Aboth,* “ತಂದೆಗಳು” ಎಂದು ಹೆಸರಿಸಲಾಗಿದೆ. ಇದು ಪ್ರಸಿದ್ಧ ಪಂಡಿತರಿಂದ ಜ್ಞಾನದ ಹೇಳಿಕೆಯಿಂದ ತೆಗೆದುಕೊಂಡಿರಬಹುದು ಎಂದು ಹೇಳುವರು. [16]Robert H. Mounce, *Matthew,* New International Biblical Commentary (Peabody, Mass.: Hendrickson Publishers, 1991), 215. [17]Talmud *Erubin* 13b. [18]Adapted from Jack Wilhelm *RSVP Newsletter* (1991). [19]Wilkins, 143.